

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 07 Issue : 167 Saturday 08-03-2025 E-mail : maruti.b.hosamani76@gmail.com Page: 4 Price : Rs. 1/-


## ಎನ್‌ಎಸ್‌ಎಸ್ ವಿದ್ಯಾರ್ಥಿಗಳಲ್ಲಿ ಸೇವಾ ಮನೋಭಾವನೆ ಬೆಳೆಸುತ್ತದೆ: ಪ್ರಾಚಾರ್ಯ ಎಂ.ಎಸ್. ಗೌಡರ

**ಸಿಹಿ ಕಹಿ ಸುದ್ದಿ,**

**ರೋಣ :** ರೋಣ ನಗರದ ಪ್ರತಿಷ್ಠಿತ ಮಹಾ ವಿದ್ಯಾಲಯವಾದ ರಾಜೀವ್ ಗಾಂಧಿ ಶಿಕ್ಷಣ ಸಂಸ್ಥೆಯ, ರಾಜೀವ್ ಗಾಂಧಿ ಕಲಾ ಹಾಗೂ ವಾಣಿಜ್ಯ ಪದವಿ ಕಾಲೇಜಿನ 2024 –25 ನೇ. ಸಾಲಿನ ಎನ್.ಎಸ್.ಎಸ್ ನ ವಾರ್ಷಿಕ ವಿಶೇಷ ಶಿಬಿರವನ್ನು ರೋಣ ತಾಲೂಕಿನಿಂದ ಆರು ಕಿಲೋಮೀಟರ್ ದೂರದಲ್ಲಿರುವ ದತ್ತು ಗ್ರಾಮ ಬಾಸಲಾಪುರ ಆಯೋಜಿಸಲಾಗಿತ್ತು.



ಶಿಬಿರದ ಮೊದಲ ದಿನದಲ್ಲಿ ಶಿಬಿರದ ಉದ್ಘಾಟನಾ ಸಮಾರಂಭ ಆಚರಿಸಲಾಯಿತು. ಈ ಸಮಾರಂಭದಲ್ಲಿ ದೀಪ ಬೆಳಗಿಸುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಎನ್.ಎಸ್.ಎಸ್ ಘಟಕದ ಕಾರ್ಯಕ್ರಮ ಅಧಿಕಾರಿಗಳಾದ ಜೆ.ಪಿ ಪಾಟೀಲರವರು ಎನ್.ಎಸ್ ಘಟಕದ ಇತಿಹಾಸ ಹಾಗೂ ಅದರ ಉದ್ದೇಶಗಳಾದ ಪರಿಸರ ಸಂರಕ್ಷಣೆ, ಆರೋಗ್ಯ ಜಾಗೃತಿ, ಶ್ರಮದಾನ, ಪ್ರಗತಿಪರ ಚಿಂತನೆ, ಪ್ರಾಕೃತಿಕ ವಿಕೋಪ ಮತ್ತು ಪ್ರಕೃತಿ ಸಂರಕ್ಷಣೆ, ಶೈಕ್ಷಣಿಕಮತ್ತು ಸಾಂಸ್ಕೃತಿಕ ಚಟುವಟಿಕೆಗಳು

ಮಕ್ಕಳು ಮತ್ತು ಮಹಿಳಾ ಜಾಗೃತಿ, ಪ್ರಾಚ್ಯ ವಸ್ತುಗಳ ಸಂರಕ್ಷಣೆ ನಾಡಗೀತೆ ದೇಶ ಭಕ್ತಿ ಗೀತೆ ರಾಷ್ಟ್ರಗೀತೆ ಎನ್.ಎಸ್. ಎಸ್. ಗೀತೆ ಇವುಗಳ ಮೂಲಕ ಜನರಿಗೆ ರಾಷ್ಟ್ರೀಯ ಜಾಗೃತಿ ಮೂಡಿಸುವುದರ ಜೊತೆಗೆ ವಿದ್ಯಾರ್ಥಿಗಳಿಗೆ ಸೇವಾ ಮನೋಭಾವನೆಯ ಹಾಗೂ ಶಿಬಿರದ ಮಹತ್ವವನ್ನು ವಿವರಿಸಿದರು. ಮಹಾ ವಿದ್ಯಾಲಯದ ಪ್ರಾಚಾರ್ಯರಾದ ಎಸ್. ಗೌಡರ ರವರು ಕಾರ್ಯಕ್ರಮ ಉದ್ದೇಶಿಸಿ ರಾಷ್ಟ್ರೀಯ ಸೇವಾ ಯೋಜನೆಯ ಸ್ವ–ಯಂ ಸೇವಕನ ಕರ್ತವ್ಯಗಳು

ಬದಲಾಯಿಸಿ ಸ್ವಯಂ ಸೇವಕನು ಪಾಲ್ಗೊಳ್ಳುವ ಕಾರ್ಯಕ್ರಮಗಳಲ್ಲಿ ಉತ್ತಮ ಅಭಿಪ್ರಾಯವನ್ನು ಜನರಲ್ಲಿ ಬಿಂಬಿಸುವುದು. ಸಮುದಾಯದ ಅವಶ್ಯಕತೆಗಳು, ಸಮಸ್ಯೆಗಳು ಮತ್ತು ಸಂಪನ್ಮೂಲಗಳನ್ನು ಗುರುತಿಸುವುದು. ತಾನು ಕಲಿತ ಅನುಭವದ ಸಹಾಯದಿಂದ ಸಮುದಾಯದ ಆವಶ್ಯಕತೆಗಳಿಗೆ ಸ್ಪಂದಿಸುವುದು. ಪ್ರತಿಯೊಂದು ಕಾರ್ಯಕ್ರಮವನ್ನು ಡೈರಿ ಪುಸ್ತಕದಲ್ಲಿ ವ್ಯವಸ್ಥಿತವಾಗಿ ಬರೆದು ಕಾಲಕಾಲಕ್ಕೆ ಆದ ಬೆಳವಣಿಗೆಗಳನ್ನು ಗಮನಿಸುವುದು. ವರ್ಷಕ್ಕೊಮ್ಮೆ ರಕ್ತದಾನ ಮಾಡುವುದು. (ಆರೋಗ್ಯವಂತ ಪುರುಷರು ಪ್ರತೀ ಮೂರು ತಿಂಗಳಿಗೊಮ್ಮೆ ಮತ್ತು ಸ್ತ್ರೀಯರು ಪ್ರತೀ ನಾಲ್ಕು ತಿಂಗಳಿಗೊಮ್ಮೆ ರಕ್ತದಾನ ಮಾಡುವುದು) ಯೋಜನಾಧಿಕಾರಿ ಅಥವಾ ತಂಡದ ನಾಯಕನ ಅಡಿಯಲ್ಲಿ ಅವರ ಮಾರ್ಗದರ್ಶನದಂತೆ ಕೆಲಸ ಮಾಡುವುದು. ಆತ್ಮವಿಶ್ವಾಸ ಬೆಳೆಸಿಕೊಳ್ಳುವುದು ಮತ್ತು ಕೆಲಸ ಕಾರ್ಯಗಳನ್ನು ಸ್ವತಃ ನಿರ್ವಹಿಸುವುದು. 24 ಗಂಟೆಗಳೂ ಸೇವೆಗೆ ಲಭ್ಯರಾಗಿರುವುದು. ಎನ್.ಎ. ರಾಷ್ಟ್ರೀಯ ಸೇವಾ ಯೋಜನೆಯ ಎಲ್ಲಾ ಕಾರ್ಯಕ್ರಮಗಳಲ್ಲೂ ಸಕ್ರೀಯವಾಗಿ ಪಾಲ್ಗೊಳ್ಳುವುದು. ಶಿಸ್ತು, ಸಮಯ ಪಾಲನೆ, ಸಹಬಾಳ್ವೆ, ಶ್ರಮದಾನ ಇತ್ಯಾದಿಗಳನ್ನು ಚಾಚೂ ತಪ್ಪದೆ ಪಾಲಿಸುವುದು.

ಕೆಲಸ ಮಾಡುವಾಗ ಕಡ್ಡಾಯವಾಗಿ ರಾಷ್ಟ್ರೀಯ ಸೇವಾ ಯೋಜನೆಯ ಬ್ಯಾಡ್ಜನ್ನು ಧರಿಸುವುದು. ರಾಷ್ಟ್ರೀಯ ಸೇವಾ ಯೋಜನೆಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ತನ್ನ ಸ್ನೇಹಿತರನ್ನು ಪ್ರೇರೇಪಿಸುವುದು ಎಂದು ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ಸಾನಿಧ್ಯವನ್ನು ವೇದಮೂರ್ತಿ ಪಂಚಾಕ್ಷರಯ್ಯ ಹಿರೇಮಠ ಅಧ್ಯಕ್ಷತೆಯನ್ನು ಮಿಥುನ್.ಜಿ ಪಾಟೀಲ್ ಮುಖ್ಯ ಅತಿಥಿಗಳಾಗಿ, ಪ್ರಾಚಾರ್ಯರಾದ ಎಂ.ಎಸ್ ಗೌಡರ ,ರವೀಂದ್ರ ಕೊಪ್ಪದ ಶರಣಪ್ಪ ಮೇಟಿ ಶಾಂತಮ್ಮ ಪಾಟೀಲ್ ರೇಣುಕಾ ಹಲ್ಲೂರ , ಎನ್.ಎಸ್. ಎಸ್ ಯೋಜನಾಧಿಕಾರಿಗಳಾದ ಜೆ.ಪಿ ಪಾಟೀಲ್ ಶಿಬಿರಾರ್ಥಿಗಳು ಕಾಲೇಜಿನ ಉಪನ್ಯಾಸಕ ಬಳಗ ಹಾಗೂ ಊರಿನ ಸಮಸ್ತ ಜನರು ಉಪಸ್ಥಿತರಿದ್ದರು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:**
**ಎಸ್.ವಿ ಸಂಕನಗೌಡ್ರ.**
**ರೋಣ.ಗದಗ**

## ಕೆರೆಗಳಿಗೆ ನೀರು ಹರಿಸುವಂತೆ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ



**ಹೂವಿನ ಹಿಪ್ಪರಗಿ :** ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನ ಹೂವಿನ ಹಿಪ್ಪರಗಿಯ ಪರಮಾನಂದ ವೃತ್ತದಲ್ಲಿ ನಡೆದ ಧರಣಿ ಸತ್ಯಾಗ್ರಹ. ಅಖಂಡ ಕರ್ನಾಟಕ ರೈತ ಸಂಘ ಹಾಗೂ ವಿವಿಧ ಹೋರಾಟ ಪರ ಸಂಘಟನೆಗಳಿಂದ ಧರಣಿ ಸತ್ಯಾಗ್ರಹ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಅರವಿಂದ ಕುಲಕರ್ಣಿ ನೇತೃತ್ವದಲ್ಲಿ ನಡೆದ ಧರಣಿ ಸತ್ಯಾಗ್ರಹ ಅಖಂಡ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಅರವಿಂದ ಕುಲಕರ್ಣಿ ಅವರು ಮಾತನಾಡಿ

ರಾಜ್ಯ ಸರ್ಕಾರ ಸೂಟ್ ಕೇಸ್ ದುಡ್ಡು ತಗೊಂಡು ಆಂದ್ರ ಪ್ರದೇಶ, ತೆಲಂಗಾಣಕ್ಕೆ ನೀರು ಬಿಟ್ಟಿದೆ ನಮ್ಮ ನೀರನ್ನು ನಮಗೆ ಬಿಡದೆ ಸರ್ಕಾರ ದುಡ್ಡಿಗಾಗಿ ನೀರನ್ನು ಮಾರಿ ಕೊಂಡಿದ್ದಾರೆ ಬೇಸಿಗೆ ಬರುತ್ತದೆ ನಮಗೆ ಕುಡಿಯುವುದಕ್ಕೆ ನೀರಿಲ್ಲ ನಮ್ಮ ದನ–ಕರಗಳಿಗೆ ಕುಡಿಯುವುದಕ್ಕೆ ನೀರು ಇಲ್ಲ

ನಮ್ಮ ಜಿಲ್ಲೆಯ ಆಲಮಟ್ಟಿ ಆಣೆಕಟ್ಟಿನಿಂದ ಮತ್ತು ನಾರಾಯಣಪುರ ಜಲಾಶಯದಿಂದ ಈ ಕರ್ನಾಟಕ ಸರ್ಕಾರ ನಮಗೆ ನೀರು ಕೊಡದೆ ಹೊರ ರಾಜ್ಯಕ್ಕೆ ನೀರು ಕೊಟ್ಟಿದೆ ಇದು ನಮ್ಮ ರೈತರಿಗೆ ಮಾಡಿದ ಅನ್ಯಾಯ ಇದೆ ರೀತಿ ಮುಂದುವರೆದರೆ ರಾಜ್ಯ ಸರ್ಕಾರ ಈಗ ನಡೆದ ಅಧಿವೇಶನದಲ್ಲಿ ನಮ್ಮ ಸಚಿವರು, ಶಾಸಕರು ನಮ್ಮ ರೈತರ ಸಮಸ್ಯೆ ಬಗೆಹರಿಸಿ ಬೇಕು ಒಂದು ವೇಳೆ ನಮಗೆ ನ್ಯಾಯ ಕೊಡದೆ ಹೋದಲ್ಲಿ ನಾವು ಮುಂಬರುವ ದಿನಗಳಲ್ಲಿ ನಮ್ಮ ರೈತರು ವಿಧಾನ ಸೌದಕ್ಕೆ ಮುತ್ತಿಗೆ ಹಾಕ ಬೇಕಾಗುತ್ತದೆ ಎಂದರು. ಆನಂತರ ಎ.ಃ.ಎ.ಓ.ಐ ಅಧಿಕಾರಿಗಳು ಪ್ರತಿಭಟನೆ ಮಾಡುವ ಸ್ಥಳಕ್ಕೆ ಆಗಮಿಸಿ ರೈತರ ಮನ ಒಲಿಸಿದರು. ಆನಂತರ ರೈತರು ಪ್ರತಿಭಟನೆಯನ್ನು ಹಿಂಪಡೆದರು.

ಇದೇ ಸಮಯದಲ್ಲಿ ಪೊಲೀಸ್ ಇಲಾಖೆಯವರು ಸರ್ಕಾರಿ ಅಧಿಕಾರಿಗಳು ಹಲವಾರು ರೈತರು ಉಪಸ್ಥಿತರಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:**
**ಮೈಬೂಬಬಾಷ.ಮನಗೂಳಿ.ತಾಳಿಕೋಟೆ**

## ಮೂಲ ವಿಜ್ಞಾನದ ಕಲಿಕೆಗೆ ಮಹತ್ವ ಕೊಡಿ



**ರಬಕವಿ :** ಇಂದಿನ ದಿನಗಳಲ್ಲಿ ವಿದ್ಯಾರ್ಥಿಗಳು ಮೂಢ ನಂಬಿಕೆಗಳನ್ನು ತೊಡೆದು, ಮೂಲ ವಿಜ್ಞಾನದ ಕಲಿಕೆಗೆ ಹೆಚ್ಚಿನ ಮಹತ್ವ ನೀಡಬೇಕು. ಶಾಲೆಯಲ್ಲಿವಿಜ್ಞಾನಕುರಿತುಪಾಠ ಬೋಧನೆ ಮಾಡಿ ಮನೆಯಲ್ಲಿ ಮೂಢ ನಂಬಿಕೆ ಆಚರಿಸುವ ವ್ಯಕ್ತಿಗೆ ಯಾವುದೆ ಮೌಲ್ಯ ಇಲ್ಲ ಎಂದು ರಬಕವಿಯ ಬಸವ ಎಜ್ಯುಕೇಶನ್ ಸೊಸೈಟಿಯ ನಿರ್ದೇಶಕ ಗಿರೀಶ ಎಂ. ಮುತ್ತೂರ ತಿಳಿಸಿದರು.

ರಬಕವಿ ಶಿಕ್ಷಣ ಸಂಸ್ಥೆಯ ಕನ್ನಡ ಮಾಧ್ಯಮ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡ ವಿಜ್ಞಾನ ದಿನಾಚರಣೆಯ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸುತ್ತಮುತ್ತಲಿನ ಪರಿಸರದಲ್ಲಾದ ಬದಲಾವಣೆಯನ್ನು ಗಮನಿಸುವುದರ ಜೊತೆಗೆ ಪ್ರಶ್ನೆ ಮಾಡುವುದರಿಂದ ಹೊಸತನ್ನು ಅವಿಷ್ಕಾರ ಮಾಡಲಾಗುತ್ತದೆ. ಸೂಕ್ಷ್ಮ ಗ್ರಹಿಕೆಯಿಂದ ವಿಜ್ಞಾನದಲ್ಲಿ ಬಹಳಷ್ಟು ಸಂಶೋಧನೆಗಳಾಗಿವೆ. ಅವಶ್ಯಕತೆಯೇ ಸಂಶೋಧನೆಗಳ ತಾಯಿ. ತಂತ್ರಜ್ಞಾನದೊಂದಿಗೆ ಸಂಪ್ರದಾಯ ಮತ್ತು ಸಂಸ್ಕಾರವನ್ನು ಪರಿಶೀಲಿಸಿ ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ವಿಜ್ಞಾನದ ಅನೇಕ ವಸ್ತುಗಳನ್ನು ಪ್ರದರ್ಶಿಸಿ ಎಲ್ಲರ ಗಮನ ಸೆಳೆದರು.

ಶಿಕ್ಷಣಸಂಸ್ಥೆಯಚೇರ್ಮನಬಸವರಾಜಮಹಾದೇವಪ್ಪ ಯೆಂಡಿಗೇರಿ ಪ್ರದರ್ಶನ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಆಡಳಿತ ಮಂಡಳಿಯ ಸದಸ್ಯರಾದ ಚಿದಾನಂದ ಗಾಳಿ, ಈಶ್ವರ ಬೀಳಗಿ, ಶಿವಾನಂದ ಹೊಸಮನಿ, ಬಿ. ಎಂ. ಮಟ್ಟಿಕಲ್ಲಿ, ಚಿದಾನಂದ ಸೋಲಾಪುರ, ಎಂ. ಎಸ್. ಬಾದಾಮಿ, ಶಾಲಾ ಸಿಬ್ಬಂದಿಗಳಾದ, ಬಿ. ವಿ. ಅಮ್ಮಲಜೇರಿ, ಪಿ. ಸಿ. ಸೋಲಾಪುರ, ಎಸ್. ಎಸ್. ಹೊಸಮನಿ, ಎಲ್. ಎಸ್. ಸಣ್ಮನಿ, ಎ. ಡಿ. ಎರಡರಹಟ್ಟಿ, ಎಸ್. ಎನ್. ಖವಾಸಿ, ಟಿ. ವಿ. ಹಾಗರಗಿ, ಎಸ್. ಬಿ. ಬೆಕ್ಕೇರಿ, ಬಿ. ಎಸ್. ಕಳ್ಳಿಗುದ್ದಿ, ಮುದ್ದಾಪುರ ಶಿಕ್ಷಕರು ಸೇರಿದಂತೆ ಇನ್ನೂ ಅನೇಕರು ಹಾಜರಿದ್ದರು.

## ಸರಕಾರಿ ನೌಕರರ ಸಹಕಾರ ಸಂಘದ ಅಧ್ಯಕ್ಷ ಉಪಾಧ್ಯಕ್ಷರ ಅವಿರೋಧ ಆಯ್ಕೆ





**ರಬಕವಿ :** ಸರಕಾರಿ ನೌಕರರ ಸಹಕಾರ ಸಂಘ ನಿಯಮಿತ ರಬಕವಿ ಇದರ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಬಿ. ಡಿ. ನೇಮಗೌಡ ಹಾಗೂ ಉಪಾಧ್ಯಕ್ಷರಾಗಿ ಬಸವರಾಜ ಹೊಸೂರ ಅವಿರೋಧವಾಗಿ ಆಯ್ಕೆಯಾದರು.

ಸದಸ್ಯರಾಗಿ ಎಂ. ಎಚ್. ಲಾಡಖಾನ, ಪ್ರಕಾಶ ಮಠಪತಿ, ಜಿ. ಗಿ. ಕುಲಗೋಡ, ಆರ್. ಬಿ. ಹೋಟಕರ,

ಬಿ. ಬಿ. ಮುಧೋಳ, ಭಾರತಿ ಗಂಗಾವತಿ, ರಾಜೇಶ್ವರಿ ಬಾಣಕಾರ, ಈರಪ್ಪ ಕುಂಬಾರ, ಬಸಪ್ಪ ತೇಲಿ, ಮಂಜುನಾಥ ಆಲಗೂರ, ಸತೀಶ ತಳವಾರ ಆಯ್ಕೆಯಾಗಿದ್ದಾರೆ ಎಂದು ಘೋಷಿಸಿದರು.

## ಸುಸೂತ್ರವಾಗಿ ಜರುಗಿದ ಪಿಯುಸಿ ಮೊದಲ ದಿನದ ಪರೀಕ್ಷೆ



**ರಬಕವಿ–ಬನಹಟ್ಟಿ :** ಪಿಯುಸಿ ದ್ವಿತೀಯ ವರ್ಷದ ಪರೀಕ್ಷೆಗಳು ಯಾವುದೆ ತೊಂದರೆ ಇಲ್ಲದೆ ಸುಸೂತ್ರವಾಗಿ ಅವಳಿ ನಗರದ ನಾಲ್ಕು ಕೇಂದ್ರಗಳಲ್ಲಿ ನಡೆದವು ಎಂದು ರಬಕವಿ ಬನಹಟ್ಟಿ ತಹಶೀಲ್ದಾರ್ ಗಿರೀಶ ಸ್ವಾದಿ ತಿಳಿಸಿದರು.

ಅವರು ಶನಿವಾರ ಇಲ್ಲಿನ ಎಸ್. ಆರ್. ಎ. ಸಂಯುಕ್ತ ಪದವಿ ಪೂರ್ವ ಕಾಲೇಜಿನ ಪರೀಕ್ಷಾ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿ ಮಾತನಾಡಿದರು. ಸರ್ಕಾರಿ ಪದವಿ ಪೂರ್ವ ಕಾಲೇಜು ಮತ್ತು ಕೊಣ್ಣೂರ ಕಾಲೇಜು ಪರೀಕ್ಷಾ ಕೇಂದ್ರಕ್ಕೂ ತಹಶೀಲ್ದಾರ್ ಗಿರೀಶ ಸ್ವಾದಿ ಭೇಟಿ ನೀಡಿದರು.

ಬನಹಟ್ಟಿಯ ಪಿ. ಎಸ್. ಐ. ಶಾಂತಾ ಹಳ್ಳಿ ಕೂಡಾ ಪರೀಕ್ಷಾ ಕೇಂದ್ರಕ್ಕೆ ಭೇಟಿ ಸೂಕ್ತ ಭದ್ರತೆ ಒದಗಿಸಿದ್ದರು. ಸರಿಯಾದ ಸಮಯಕ್ಕೆ ಪರೀಕ್ಷೆಗಳು ಆರಂಭವಾಗಿದ್ದು, ವಿದ್ಯಾರ್ಥಿಗಳು ಶಾಲಾ ಕಾಲೇಜುಗಳ ಬಸ್ ಮೂಲಕ, ಸರ್ಕಾರಿ ಬಸ್ ಮತ್ತು ಟಂ ಟಂ ಮೂಲಕ ಹಾಗೂ ಕೆಲವು ವಿದ್ಯಾರ್ಥಿಗಳನ್ನು ಪಾಲಕರೇ ತಮ್ಮ ವಾಹನಗಳ ಮೂಲಕ ಪರೀಕ್ಷಾ ಕೇಂದ್ರಕ್ಕೆ ಕರೆದುಕೊಂಡು ಬರುತ್ತಿರುವುದು ಸಾಮಾನ್ಯವಾಗಿತ್ತು.

ಪರೀಕ್ಷಾಕೇಂದ್ರದಉಪಮುಖ್ಯಅಧೀಕ್ಷಕಶಿವಕುಮಾರ ಬಿರಾದಾರಪಾಟೀಲ, ಆಶಾ ಕಾರ್ಯಕರ್ತೆ ಬೇಬಿ ಹಾಸೀಲಕರ ಹಾಜರಿದ್ದರು.

## ನೇಕಾರರ ಬೆನ್ನಿಗೆ ಸರ್ಕಾರ ನಿಲ್ಲುತ್ತಿಲ್ಲ



**ರಬಕವಿ–ಬನಹಟ್ಟಿ :** ನೇಕಾರಿಕೆ ಉದ್ಯೋಗ ಮತ್ತು ಇದೀಗ ಅತ್ಯಂತ ಕಠಿಣ ಪರಿಸ್ಥಿತಿಯಲ್ಲಿದ್ದು , ಆರ್ ಉದ್ಯೋಗವನ್ನು ಅವಲಂಬಿಸಿರುವ ನೇಕಾರರು ದಯನೀಯ ಸ್ಥಿತಿಯಲ್ಲಿದ್ದಾರೆ. ಸಾಲದ ಮರುಪಾವತಿಯನ್ನು ಮಾಡದೆ ನೇಕಾರರು ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಿದ್ದಾರೆ. ಸರ್ಕಾರ ಕೂಡಾ ನೇಕಾರರ ಬೆನ್ನಿಗೆ ನಿಲ್ಲುತ್ತಿಲ್ಲ. ಸರ್ಕಾರ ನೇಕಾರರಿಗೆ ಯಾವುದೇ ರೀತಿಯ ಸಹಾಯ ಸೌಲಭ್ಯಗಳನ್ನು ನೀಡದೆ ಇರುವುದು ಖಂಡನೀಯವಾಗಿದೆ ಎಂದು ಶಾಸಕ ಸಿದ್ದು ಸವದಿ ಆಕ್ರೋಶ ವ್ಯಕ್ತಪಡಿಸಿದರು. ಇತ್ತೀಚೆಗೆ ಬನಹಟ್ಟಿಯಲ್ಲಿ ಆತ್ಮಹತ್ಯೆಯನ್ನು ಮಾಡಿಕೊಂಡಿದ್ದ ನೇಕಾರ ಸಂಗಮೇಶ ಮುರಗೋಡರ ಮನೆಗೆ ತೆರಳಿ ಅವರ ಕುಟುಂಬ ವರ್ಗಕ್ಕೆ ಸಾಂತ್ವನ ಹೇಳಿದರು.

ನೇಕಾರರ ಆತ್ಮಹತ್ಯೆಯಂತಹ ಘಟನೆಗಳ ಬಗ್ಗೆ ಮುಂಬರುವ ಅಧಿವೇಶನದಲ್ಲಿ ಸರ್ಕಾರದ ಗಮನ ಸೆಳೆಯಲಾಗುವುದು.ಜವಳಿ ಖಾತೆಯ ಸಚಿವರು ನಮ್ಮ ಭಾಗದವರೇ ಆಗಿದ್ದರೂ ಅವರಿಗೆ ನೇಕಾರರ ಕುರಿತು ಯಾವುದೆ ಚಿಂತನೆ ಇಲ್ಲ. ನೇಕಾರರು ಯಾವುದೆ ಕಾಲಕ್ಕೂ ಆತ್ಮಹತ್ಯೆಯನ್ನು ಮಾಡಿಕೊಳ್ಳಬಾರದು. ಪರಿಸ್ಥಿತಿಯನ್ನು ಧೈರ್ಯದಿಂದ ಎದುರಿಸಬೇಕು ಎಂದು ಶಾಸಕ ಸಿದ್ದು ಸವದಿ ತಿಳಿಸಿದರು.

ಈ ಸಂದರ್ಭದಲ್ಲಿ ನೇಕಾರ ಮುಖಂಡರಾದ ಮಹಾದೇವ ನುಚ್ಚಿ, ಪ್ರವೀಣ ಧಬಾಡಿ, ಶ್ರೀಶೈಲ ಬೀಳಗಿ, ದುರ್ಗವ್ವ ಹರಿಜನ, ಸದಾಶಿವ ಪರೀಟ, ಈರಣ್ಣ ಚಿಂಚಖಂಡಿ, ಶಶಿ ವಡೋಡಗಿ, ತಿಪ್ಪಣ್ಣ ಬಸಪ್ಪಗೋಳ ಮತ್ತು ಕುಟುಂಬ ವರ್ಗದವರು ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

## ಸಾಹಿತ್ಯ ಲೋಕಕ್ಕೆ ಅಶೋಕ ನರೋಡೆಯವರ ಕೊಡುಗೆ ಅಪಾರ



ಮಹಾಲಿಂಗಪುರ: ಸುದೀರ್ಘ 38 ವರ್ಷಗಳ ಕಾಲ ಉಪನ್ಯಾಸಕರಾಗಿ, ಕರ್ನಾಟಕ ವಿವಿ, ರಾಣಿ ಚನ್ನಮ್ಮ ವಿವಿ, ಕನ್ನಡ ವಿವಿ ಸೇರಿದಂತೆ ಅನೇಕ ವಿಶ್ವವಿದ್ಯಾಲಯಗಳಲ್ಲಿ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸಿರುವ ಡಾ. ಅಶೋಕ ನರೋಡೆ ಅವರು ಸಾಹಿತ್ಯ ಲೋಕಕ್ಕೆ ನೀಡಿದ ಕೊಡುಗೆ ಅಪಾರವಾಗಿದೆ ಎಂದು ಡಾ. ವ್ಹಿ. ಎಸ್. ಮಾಳಿ ಹೇಳಿದರು.

ಪಟ್ಟಣದ ಕೆಎಲ್‌ಇ ಸಂಸ್ಥೆಯ ಎಸ್ಸಿಪಿ ಕಲಾ, ವಿಜ್ಞಾನ ಮತ್ತು ಡಿ. ಡಿ. ಶಿರೋಳ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಹಿರಿಯ ವಿದ್ಯಾರ್ಥಿಗಳ ಸಂಘದ ಸಂಯುಕ್ತ ಆಶ್ರಯದಲ್ಲಿಡಾ.ಅಶೋಕನರೋಡೆಯವರ ಸೇವಾ ನಿವೃತ್ತಿ, ಪುಸ್ತಕ ಬಿಡುಗಡೆ ಹಾಗೂ ಬೀಳ್ಕೊಡುವ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು ಡಾ. ಅಶೋಕ ನರೋಡೆಯವರ ನಿವೃತ್ತಿ ಜೀವನವು ಸಾಹಿತ್ಯದ ಸುಗಂಧದ ಪರಿಮಳದಿಂದ ಕೂಡಿರಲಿ ಎಂದರು.

ದಿವ್ಯಸಾನಿಧ್ಯ ವಹಿಸಿದ್ದ ಮರೆಗುದ್ದಿಯ ನಿರುಪಾಧೀಶ ಸ್ವಾಮಿಗಳು ಮಾತನಾಡಿ ಉಪನ್ಯಾಸಕರಾಗಿ, ಸಾಹಿತಿಗಳಾಗಿ ಅಪಾರ ಸೇವೆ ಸಲ್ಲಿಸಿದ ನರೋಡೆಯವರ ನಿವೃತ್ತಿಯ ಜೀವನ ಸುಖಕರವಾಗಿರಲಿ. ನಿವೃತ್ತಿ ಜೀವನದಲ್ಲಿ ಪೂರ್ಣ ಪ್ರಮಾಣ ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಂಡು ಮತ್ತಷ್ಟು ಮೌಲ್ಯಾಧಾರಿತ ಪುಸ್ತಕಗಳು ನರೋಡೆಯವರ ಲೇಖನಿಯಿಂದ ಹೊರ ಹೊಮ್ಮಲಿ ಎಂದು ಶುಭ ಹಾರೈಸಿದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಡಾ. ಕೆ. ಎಮ್. ಅವರಾದಿ ಮಾತನಾಡಿ ಡಾ. ಅಶೋಕ ನರೋಡೆ ಅವರು ವೃತ್ತಿಯಿಂದ ನಿವೃತ್ತಿ ಹೊಂದುತ್ತಿದ್ದಾರೆಯೆ ಹೊರತು ಪ್ರವೃತ್ತಿಯಿಂದಲ್ಲ. ಇವರ ಸಾಹಿತ್ಯ ಕೃತಿಗಳು ಓದುಗರ ಜೀವನಕ್ಕೆ ಪ್ರೇರಣೆಯಾಗಿವೆ. ನಿವೃತ್ತಿ ನಂತರವೂ ಅವರು ಹೆಚ್ಚೆಚ್ಚು ಪುಸ್ತಕಗಳನ್ನು ಬರೆಯಲಿ ಎಂದರು.

ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಎಲ್. ಬಿ. ತುಪ್ಪದ,

ಪ್ರೌಢ ಶಾಲಾ ಉಪ ಪ್ರಾಚಾರ್ಯ ಬಿ. ಎನ್. ಅರಕೇರಿ, ಐ.ಕ್ಯೂ.ಎಸ್.ಸಿ. ಸಂಯೋಜಕಿ ಡಾ. ಎಸ್. ಡಿ. ಸೋರಗಾಂವಿ. ಐ.ಟಿ.ಐ ಪ್ರಾಚಾರ್ಯ ಎಸ್. ಎಸ್. ಅಂಗಡಿ, ಪ್ರಾಥಮಿಕ ಶಾಲಾ ಮುಖ್ಯ ಗುರುಮಾತೆ ಶ್ರೀಮತಿ ಜೆ. ಎಸ್. ಹಿರೇಮಠ, ಸ್ಥಾನಿಕ ಆಡಳಿತ ಮಂಡಳಿ ಸದಸ್ಯ ಅಶೋಕ ಅಂಗಡಿ ಉಪಸ್ಥಿತರಿದ್ದರು.

ನಿವೃತ್ತರಾದ ಉಪನ್ಯಾಸಕ ಡಾ. ಅಶೋಕ ನರೋಡೆ ದಂಪತಿಗಳನ್ನು ಕಾಲೇಜು ಆಡಳಿತ ಮಂಡಳಿ, ಉಪನ್ಯಾಸಕರು, ಹಳೆಯ ವಿದ್ಯಾರ್ಥಿಗಳು, ಸಾಹಿತಿಗಳು ಸನ್ಮಾನಿಸಿ ಗೌರವಿಸಿದರು.

ಡಾ. ಶಂಕರ ಕೋಳಿ ಪುಷ್ಪಾರ್ಚನೆ ನಡೆಸಿದರು. ಆರ್. ಎಸ್. ಪೂಜಾರಿ ಸ್ವಾಗತಿಸಿದರು. ಎಸ್. ಎಚ್. ಮೆಳವಂಕಿ, ಈರಣ್ಣ ಶಿರೋಳ ಸೊಗಸಾಗಿ ನಿರೂಪಿಸಿದರು. ಅರ್ಜುನ ಹಲಗಿಗೌಡರ ಕೊನೆಯಲ್ಲಿ ವಂದಿಸಿದರು.

# ಡಾ. ಅಂಬೇಡ್ಕರ್ರ ಬದುಕು ಮತ್ತು ಸಾಧನೆಗಳ ಕುರಿತ ವಿಶೇಷ ಉಪನ್ಯಾಸ



**ವಿಜಯಪುರ :** ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ 'ಡಾ. ಅಂಬೇಡ್ಕರ್ ಓದು' ಎಂಬ ಡಾ. ಬಿ.ಆರ್.ಅಂಬೇಡ್ಕರ್ ಅವರ ಬದುಕು ಮತ್ತು ಸಾಧನೆಗಳ ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮ ನಗರದ ಎ.ಎಸ್.ಪಾಟೀಲ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಶುಕ್ರವಾರ ಜರುಗಿತು.

ಅಪರ ಜಿಲ್ಲಾಧಿಕಾರಿ ಸೋಮಲಿಂಗ ಗೆಣ್ಣೂರ ಅವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಅಂಬೇಡ್ಕರ್ ಅವರ ಬದುಕು, ಸಾಧನೆಗಳ ಕುರಿತು ವಿವರಿಸಿದರು.

ವಿಶೇಷ ಉಪನ್ಯಾಸ ನೀಡಿದ ಡಾ.ಮಾಧವ ಎಸ್.ಗುಡಿ ಅವರು, ಅಪಾರ ಪಾಂಡಿತ್ಯ ಹಾಗೂ ಬಹುಮುಖ ವ್ಯಕ್ತಿತ್ವ ಹೊಂದಿದ್ದ ಡಾ. ಅಂಬೇಡ್ಕರ್ ಅವರು, ರೈತರು, ಮಹಿಳೆಯರು, ಕಾರ್ಮಿಕರು ಹಾಗೂ ದುರ್ಬಲ ವರ್ಗಗಳ ಏಳಿಗೆಗೆ ನಿರಂತರ ಹೋರಾಟ ಮಾಡಿ, ಎಲ್ಲರಿಗೂ ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯ ದೊರಕಿಸಲು ಶ್ರಮಿಸಿದರು ಎಂದು ಹೇಳಿದರು.

ಶಾಲೆಯ ಪ್ರಾಂಶುಪಾಲ ಬಿ.ಎಸ್.ಬೆಳಗಲಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಸಾಧನೆಗಳ ಕುರಿತು ಕಾಲೇಜ್ ವಿದ್ಯಾರ್ಥಿಗಳಿಗೆ ರಸಪ್ರಶ್ನೆ, ಪ್ರಬಂಧ, ಆಶು ಭಾಷಣ, ಕವನವಾಚನ ಸ್ಪರ್ಧೆ ಏರ್ಪಡಿಸಿ, ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜ್, ಎಕ್ಸಲೆಂಟ್ ವಿಜ್ಞಾನ ಪದವಿ ಪೂರ್ವ ಕಾಲೇಜ್, ವಿ.ಬಿ.ದರಬಾರ ಸಂಯುಕ್ತ ಪದವಿಪೂರ್ವ ಕಾಲೇಜ್ ಉಪನ್ಯಾಸಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸಂತೊಷ ಭೋವಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಕುಮಾರಿ ಶೃತಿ ಮೇಲಿನಮನಿ ಸುಗಮ ಸಂಗೀತ ಗಾಯನ ಪ್ರಸ್ತುತಪಡಿಸಿದರು. ಶರಣಗೌಡ ಪಾಟೀಲ ವಂದಿಸಿದರು. ಡಾ.ಸುಭಾಶಚಂದ್ರ ಕನ್ನೂರ ನಿರೂಪಿಸಿದರು.

# ರಾಷ್ಟ್ರೀಯ ವಿಜ್ಞಾನ ದಿನಾಚರಣೆ

**ವಿಜಯಪುರ:** ಬಿ.ಎಲ್.ಡಿ.ಈ ಸಂಸ್ಥೆಯ ಬಂಗಾರಮ್ಮ ಸಜ್ಜನ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಮಹಿಳಾ ಮಹಾವಿದ್ಯಾಲಯದ ಐಕ್ಯೂಎಸಿ ಅಡಿಯಲ್ಲಿ ಬಿ. ಎಸ್ಸಿ ಮತ್ತು ಬಿ. ಸಿ. ಎ. ವಿಭಾಗದ ವತಿಯಿಂದ "ರಾಷ್ಟ್ರೀಯ ವಿಜ್ಞಾನ ದಿನಾಚರಣೆ"ಯನ್ನು ಆಚರಿಸಲಾಯಿತು.

ಬೆಂಗಳೂರಿನ ಭಾರತೀಯ ಬಾಹ್ಯಾಕಾಶ ಸಂಸ್ಥೆ ವಿಜ್ಞಾನಿ ವಿಲಾಸ ರಾಠೋಡ ಅವರು ಮಾತನಾಡಿ, ಭಾರತದ ಹೆಮ್ಮೆಯ ವಿಜ್ಞಾನಿ ಸರ್.ಸಿ.ವಿ.ರಾಮನ್ ಅವರ ಅಪೂರ್ವ ಸಾಧನೆಯ ನೆನಪಿನಲ್ಲಿ ಈ ದಿನವನ್ನು ರಾಷ್ಟ್ರೀಯ ವಿಜ್ಞಾನ ದಿನವೆಂದು ಆಚರಿಸಲಾಗುತ್ತಿದೆ ಎಂದರು.


ಇದೇ ವೇಳೆ ಇಸ್ರೋ ಸಾಧನೆಗಳು, ವಿಕಸಿತ ಭಾರತದ ಕುರಿತು ಮಾತನಾಡಿ ವಿದ್ಯಾರ್ಥಿಗಳೊಂದಿಗೆ ಸಂವಾದವನ್ನು ಮಾಡಿದರು.

ಶಿಕ್ಷಣಶಾಸ್ತ್ರ ವಿಭಾಗ ಮುಖ್ಯಸ್ಥರು ವಿ.ಎಸ್. ನಂದೀಶ ಅಧ್ಯಕ್ಷೀಯ ನುಡಿಗಳನ್ನಾಡಿದರು. ಐಕ್ಯೂಎಸಿ ಸಂಯೋಜಕ ಡಾ. ಭಕ್ತಿ ಮಹೇದ್ರಕರ ಅವರು ತಮ್ಮ



ಅನಿಸಿಕೆಯನ್ನು ಹಂಚಿಕೊಂಡರು. ಕಾರ್ಯಕ್ರಮದಲ್ಲಿ ಬಿಸಿಎ ಮತ್ತು ಬಿ.ಎಸ್ ಸಿ ಸಂಯೋಜಕ ಗುರುರಾಜ ಕುಲಕರ್ಣಿ ಉಪಸ್ಥಿತರಿದ್ದರು. ಭೌತಶಾಸ್ತ್ರ ವಿಭಾಗದ ಮುಖ್ಯಸ್ಥೆ ಕು.ನಿಖಿತಾ ಸುರಪುರ ಸ್ವಗತಿಸಿದರು. ರಾಘವೇಂದ್ರ ಕುಲಕರ್ಣಿ ಪ್ರಸ್ತಾವಿಕ ನುಡಿಗಳನ್ನಾಡಿದರು. ಕು. ರಶ್ಮಿ ಅಳಗಿ ವಂದಿಸಿದರು. ಕು.ರಾಧಾ ರೆಡ್ಡಿ ಮತ್ತು ಮಂಜುನಾಥ ಮ್ಯಾಗೇಡಿ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಬೋಧಕ, ಬೋಧಕೇತರ ಸಿಬ್ಬಂದಿ ವರ್ಗದವರು ಮತ್ತು ವಿದ್ಯಾರ್ಥಿನಿಯರು ಹಾಜರಿದ್ದರು.

# ಜಿಲ್ಲಾ ಪಂಚಾಯತ ಕಚೇರಿಯಲ್ಲಿ "ಸ್ವಚ್ಛ ಶನಿವಾರ" ಆಚರಣೆ



**ಬೆಳಗಾವಿ :** ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಇಲಾಖೆ ಬೆಂಗಳೂರು ರವರ ನಿರ್ದೇಶನದಂತೆ ಜಿಲ್ಲೆಯಾದ್ಯಂತ ಪ್ರತಿ ಮಾಹೆಯ ಮೊದಲ ಶನಿವಾರವನ್ನು "ಸ್ವಚ್ಛ ಶನಿವಾರ" ವನ್ನಾಗಿ ಆಚರಿಸಲಾಗುತ್ತಿದೆ.

ಈ ಕಾರ್ಯಕ್ರಮದ ಮುಖ್ಯ ಉದ್ದೇಶ ಏನೆಂದರೆ, ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಎಲ್ಲ ಸರಕಾರಿ ಕಟ್ಟಡ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶಗಳನ್ನು ಸ್ವಚ್ಛಗೊಳಿಸುವುದು.

ಅದೇ ರೀತಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಸಾರ್ವಜನಿಕ ಸ್ಥಳಗಳಾದ ಶಾಲೆ-ಕಾಲೇಜು, ದೇವಸ್ಥಾನ, ಬಸ್ ನಿಲ್ದಾಣ, ಜಲ-ಮೂಲಗಳಗಳ ಸುತ್ತಮುತ್ತಲಿನ ಪ್ರದೇಶ,
ಮಾರುಕಟ್ಟೆ, ಮುಖ್ಯ ರಸ್ತೆ ಮುಂತಾದ ಸ್ಥಳಗಳನ್ನು ಶ್ರಮದಾನ ಕಾರ್ಯ ಮಾಡುವುದರ ಮೂಲಕ ಸ್ವಚ್ಛಗೊಳಿಸುವುದಾಗಿದೆ.

ಅದೇ ಮಾದರಿಯಲ್ಲಿ ಜಿಪಂ ಸಿ.ಇ.ಓ ರಾಹುಲ್ ಶಿಂಧೆ ರವರು ಮಾರ್ಚ ಮಾಹೆಯ ಮೊದಲ ಶನಿವಾರವನ್ನು ಜಿಲ್ಲಾ ಪಂಚಾಯತ ಕಚೇರಿಯ ಆವರಣದಲ್ಲಿ "ಸ್ವಚ್ಛ ಶನಿವಾರ" ಆಚರಿಸಲು ಎಲ್ಲ ಜಿಲ್ಲಾ ಮಟ್ಟದ ಅಧಿಕಾರಿ/ಸಿಬ್ಬಂದಿಗಳಿಗೆ ಆದೇಶಿಸಿರುತ್ತಾರೆ.

ಈ ನಿಟ್ಟಿನಲ್ಲಿ ಜಿಲ್ಲಾ ಪಂಚಾಯತನ ಜಿಲ್ಲಾ ಮಟ್ಟದ ಅಧಿಕಾರಿಗಳು/ಸಿಬ್ಬಂದಿಗಳು ತಮಗೆ ಸಂಬಂಧಿಸಿದ ಶಾಖೆಗಳಲ್ಲಿ ತಮ್ಮ-ತಮ್ಮ ಕ್ಯಾಬಿನ್ ಮತ್ತು ಕಚೇರಿಯ ಒಳಾಂಗಣ ಮತ್ತು ಹೊರಾಂಗಣ ಸ್ವಚ್ಛಗೊಳಿಸುವ ಮುಖಾಂತರ "ಸ್ವಚ್ಛ ಶನಿವಾರ"ವನ್ನು ಯಶಸ್ವಿಯಾಗಿ ಆಚರಿಸಿದರು.

ಈ ವೇಳೆ ಯೋಜನಾ ನಿರ್ದೇಶಕರ ವಿ ಬಂಗಾರೆಪ್ಪನ್ನವರ, ಉಪಕಾರ್ಯದರ್ಶಿ(ಆಡಳಿತ) ಬಸವರಾಜ್ ಹೆಗ್ಗನಾಯಕ್, ಉಪಕಾರ್ಯದರ್ಶಿ(ಅಭಿವೃದ್ಧಿ) ಬಸವರಾಜ್ ಅಡವಿಮಠ, ಮುಖ್ಯ ಲೆಕ್ಕಾಧಿಕಾರಿ ಪರಶುರಾಮ್ ದುಡಗುಂಟಿ, ಮುಖ್ಯ ಯೋಜನಾಧಿಕಾರಿ ಗಂಗಾಧರ ದಿವಟರ, ಸಹಾಯಕ ಕಾರ್ಯದರ್ಶಿ ರಾಹುಲ್ ಕಾಂಬಳೆ, ಕಚೇರಿ ವ್ಯವಸ್ಥಾಪಕ ಬಸವರಾಜ್ ಮುರಘಾಮಠ, ಸ್ವಚ್ಛ ಭಾರತ ಮಿಷನ್(ಗ್ರಾ) ಯೋಜನೆಯ ಎಲ್ಲ ಜಿಲ್ಲಾ ಸಮಾಲೋಚಕರು, ಜಿಲ್ಲಾ ಪಂಚಾಯತನ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# "ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ" ಅಂಗವಾಗಿ ಮಾರ್ಚ 8 ರಂದು ಮಹಿಳಾ ಕ್ರೀಡಾಕೂಟ

**ಬೆಳಗಾವಿ :** "ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ" ಅಂಗವಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ಮಹಿಳಾ ಕ್ರೀಡಾಕೂಟವನ್ನು ಮಾರ್ಚ 8 ರಂದು ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಜರುಗಿಸಲಾಗುತ್ತದೆ.

ಕ್ರೀಡಾಕೂಟದಲ್ಲಿ ಸ್ಕಿಪ್ಪಿಂಗ ರೋಪ್, ನಿಂಬು ಚಮಚ, ಹಗ್ಗ ಜಗ್ಗಾಟ, 60 ಮೀ ಓಟ, ಶಾಟ್‌ಪುಟ್, ಡಿಸ್ಕಸ್, ಪ್ಲ್ಯಾಂಕ್, ಸಿಟ್ ಅಪ್ಸ್, ಸಂಗೀತ ಕುರ್ಚಿ, ಗೋಣಿಚೀಲ ಓಟ ಹೀಗೆ ಮೊದಲಾದ ಸ್ಪರ್ದೆಗಳು ನಡೆಸಲಾಗವುದು.

ಕ್ರೀಡಾಕೂಟದಲ್ಲಿ ಭಾಗವಹಿಸಲು ಮಹಿಳಾ ಸ್ಪರ್ಧಿಗಳು ದಿನಾಂಕ: 08-03-2025 ರಂದು ಬೆಳಿಗ್ಗೆ 9 ಗಂಟೆಗೆ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ತಮ್ಮ ಹೆಸರುಗಳನ್ನು ನೊಂದಾಯಿಸಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ದೂರವಾಣಿ ಸಂಖ್ಯೆ: 0831-2474101ಗೆ ಸಂಪರ್ಕಿಸಬಹುದಾಗಿದೆ ಎಂದು ಯುವ ಸಬಲೀಕರಣ
ಮತ್ತು ಕ್ರೀಡಾ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# 15 ಕೋಟಿ ರೂಪಾಯಿಗಳ ಮೇಗಾ ಮಾರುಕಟ್ಟೆ ಭೂಮಿ ಪೂಜೆ: ನಾಡಗೌಡ ಅಭಿವೃದ್ಧಿ ಸಾಹುಕಾರ ಹಾಡಿಗೆ ಶಾಸಕ ನಾಡಗೌಡ ಭಾವುಕ!

**ಮುದ್ದೇಬಿಹಾಳ :** ಮತಕ್ಷೇತ್ರದಲ್ಲಿ ಅಭಿವೃದ್ಧಿಯ ಮಾಡುವದರಲ್ಲಿ ಬಹಳ ಜನರ ಕಷ್ಟದ ಪಲವಾಗಿ ಇಂದು ಮುದ್ದೇಬಿಹಾಳ ಒಂದು ಉತ್ತಮವಾದ ಪಟ್ಟಣವಾಗಿದೆ, ಈ ಹಿಂದೆ ನಮ್ಮ ಪಟ್ಟಣಕ್ಕೆ ಕುಡಿಯಲು ಸರಿಯಾದ ರೀತಿಯಲ್ಲಿ ನೀರು ಸಿಗುತ್ತಿರಲಿಲ್ಲಾ, ಎಲ್ಲಾ ಜನಪ್ರತಿನಿಧಿಗಳ ಶ್ರಮದ ಪಲವಾಗಿ ಇಂದು ನಮ್ಮ ನಗರ ಅಬಿವೃದ್ಧಿ ಕಂಡಿದೆ ಎಂದು ಶಾಸಕರಾದ ಸಿ ಎಸ್ ನಾಡಗೌಡರು ಹೇಳಿದರು.

ಪಟ್ಟಣದಲ್ಲಿ ಗ್ರಾಮದೇವತೆ ದೇವಸ್ಥಾನದ ಹತ್ತಿರ ಇರುವ ಮೇಗಾ ಮಾರುಕಟ್ಟೆ ಕಾಮಗಾರಿಯ ಭೂಮಿ ಪೂಜೆಯ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಸುಮಾರು ಎಂಟು ದಶಕಗಳಷ್ಟು ಹಳೆಯ ಮಾರ್ಕಟ್ ಶೀತಿಲಗೊಂಡಿದ್ದನ್ನು ತೆರುವು ಮಾಡಿ ಇಂದು ಸದ್ಯ 5 ಕೋಟಿ ಅನುದಾನದಲ್ಲಿ ಕಾಮಗಾರಿಯನ್ನು ಪ್ರಾರಂಬಿಸಲಾಗುತ್ತದೆ, ಮೂರು ಅಂತಸ್ತಿನ ಈ ಕಟ್ಟಡ ನಿಯಮಿತವಾಗಿ ಅನುದಾನ ತಂದು ನಿರ್ಮಾಣ ಮಾಡಲಾಗುವದು, ರಾಜಕಾರಣ ಬೇರೆ ಸ್ನೇಹ ಬೇರೆ ಎಂದು ಕಥೆಯಲ್ಲಿ ಹೇಳಿದ ಅವರು ರಾಜ್ಯ ಸರಕಾರದ ಬಜಟ್ ನಂತರ ಮುದ್ದೇಬಿಹಾಳಕ್ಕೆ ಎಷ್ಟು ಅನುದಾನ ತಂದ್ದಿದ್ದೇನೆ ಎಂದು ತಿಳಿಸುತ್ತೇನೆ ಇಂದು ನನ್ನ ಸವಾಲ್ ಎಂದು ಘೊಷಣೆ ಮಾಡಿದರು. ಈ ವೇಳೆ ಕಾರ್ಯಕ್ರಮದಲ್ಲಿ ಮ್ಯೂಜಿಕ್ ಮೈಲಾರಿ ಎಂಬ ಯುವಕನ ಅಭಿವೃದ್ಧಿ ಸಾವುಕಾರ ನಾಡಗೌಡ



ಸಾಹುಕಾರ ಎಂಬ ಹಾಡು ಕೇಳಿ ಒಂದು ಕ್ಷಣ ಶಾಸಕ ಸಿ.ಎಸ್ ನಾಡಗೌಡ ಅವರು ಕಣ್ಣುಮುಚ್ಚಿ ಭಾವುಕರಾದರು.

ನಂತರ ಗ್ಯಾರಂಟಿ ಅನುಷ್ಠಾನ ಸಮತಿಯ ಅಧ್ಯಕ್ಷರಾದ ಶಿವಶಂಕರಗೌಡ ಹಿರೇಗೌಡರ ಮಾತನಾಡಿ ಅಭಿವೃದ್ಧಿಯ ವಿಷಯದಲ್ಲಿ ಸದಾ ಮುಂಚೋಣಿಯಲ್ಲಿರುವರು ಅಪ್ಪಾಜಿ ನಾಡಗೌಡರು, ಸಧ್ಯ ಪಂಚ ಗ್ಯಾರಂಟಿಗಳ ಮುಖಾಂತರ ಕಟ್ಟಕಡೆಯ ವ್ಯಕ್ತಿಗೂ ಸೌಲಭ್ಯಗಳನ್ನು ನಮ್ಮ ಸರಕಾರದಿಂದ ನೀಡುತ್ತಿದ್ದೇವೆ, ಒಂದು ವರ್ಷದ ಅವದಿಯಲ್ಲಿ ಪಂಚ ಗ್ಯಾರಂಟಿಯ ಮುಖಾಂತರ ಸುಮಾರು 70ಕೋಟಿಕ್ಕಿಂತ ಹೆಚ್ಚು ಹಣವನ್ನು ನಮ್ಮ ಮತಕ್ಷೇತ್ರದ ಕುಟುಂಬಗಳಿಗೆ ನೀಡಿದ್ದೇವೆ, ಇನ್ನೊಂದು ವಾರದಲ್ಲಿಯೇ ಪಟ್ಟಣದ ಪ್ರತಿಯೊಂದು ನಗರಕ್ಕೂ ಸಿಟಿ ಬಸ್ ವ್ಯವಸ್ಥೆಯನ್ನು ಮಾಡಿ ಜನರಿಗೆ ಅನುಕೂಲ ಮಾಡಲಾಗುವದು ಎಂದು ತಿಳಿಸಿದರು.

ಮಾಜಿ ಕಸಾಪ ಅಧ್ಯಕ್ಷರಾದ ನಾವದಿಗಿ ಮಾತನಾಡಿ ಪಟ್ಟಣದಲ್ಲಿ ವ್ಯಾಪಾರಸ್ಥರಿಗೆ ಅನುಕೂಲವಾಗಲಿ ಎನ್ನುವ ಒಳ್ಳೆಯ ಭಾವನೆಯನ್ನಿಟ್ಟುಕೊಂಡು ಮೇಗಾ ಮಾರುಕಟ್ಟೆ ಕಾಮಗಾರಿ ಮಾಡುತ್ತಿರುವದು ಸಂತಸತಂದಿದೆ, ಅಭಿವೃದ್ದಿಯ ವಿಷಯದಲ್ಲಿ ನಮ್ಮ ಜನಗಳು, ನಾವುಗಳು ಶಾಸಕರ ಪರವಾಗಿ ನಿಲ್ಲುತ್ತೇವೆ ಎಂದು ತಿಳಿಸಿದರು.

ಇದೇ ವೇಳೆಯಲ್ಲಿ ಪುರಸಭೆ ಆಡಳಿತ ವತಿಯಿಂದ , ಬೀದಿ ಬದಿಯ ವ್ಯಾಪಾರಸ್ಥರಿಂದ, ಶಾಸಕರಿಗೆ ಸನ್ಮಾನ ಸಮಾರಂಭ ನಡೆಯಿತು. ಕಾರ್ಯಕ್ರಮದ ನಂತರ ಮನರಂಜನೆ ಕಾರ್ಯಕ್ರಮ ನಡೆದವು .ಈ ವೇಳೆ ಪುರಸಭೆ ಅಧ್ಯಕ್ಷ ಮೈಭೂಬ್ ಗೊಳಸಂಗಿ, ಮುಖ್ಯಾಧಿಕಾರಿ ಮಲ್ಲನಗೌಡ ಬಿರಾದಾರ, ಉಪಾಧ್ಯಕ್ಷೆ ಪ್ರೀತಿ ದೆಗಿನಾಳ ಪುರಸಭೆ ಸದಸ್ಯರಾದ ಚನ್ನಪ್ಪ ಕಂಠಿ, ಮುಖಂಡರಾದ ಬಿ ಸಿ ಮೊಟಗಿ, ಎಂ ಬಿ ನಾವದಗಿ ಸೇರಿದಂತೆ ಪುರಸಭೆ ಸಿಬ್ಬಂದಿ, ನಾಗರಿಕರು ಭಾಗವಹಿಸಿದ್ದರು.

# ಮಲಬಾರ ಗೋಲ್ಡ್ ಮತ್ತು ಡೈಮಂಡ್ಸ್‌ನಿಂದ ವಿದ್ಯಾರ್ಥಿನಿಯರಿಗೆ 5.10 ಲಕ್ಷ ಸ್ಕಾಲರಶಿಪ್ ವಿತರಣೆ

**ವಿಜಯಪುರ :** ನಗರದ ಮಲಬಾರ ಗೋಲ್ಡ್ ಮತ್ತು ಡೈಮಂಡ್ಸ್ ಶಾಖೆ ಹಾಗೂ ಮಲಬಾರ ಚಾರಿಟೇಬಲ್ ಟ್ರಸ್ಟ್ ವತಿಯಿಂದ 55 ವಿದ್ಯಾರ್ಥಿನಿಯರಿಗೆ 5.10 ಲಕ್ಷದ ಮೌಲ್ಯದ ಸ್ಕಾಲರಶಿಪ್ ವಿತರಣಾ ಸಮಾರಂಭ ಸೋಮವಾರ ಇಲ್ಲಿನ ಮಧುವನ ಹೊಟೇಲದಲ್ಲಿ ನಡೆಯಿತು.

ಬಿಜೆಪಿ ಮುಖಂಡ ವಿಜುಗೌಡ ಪಾಟೀಲ ಅವರು ಸಮಾರಂಭ ಉದ್ಘಾಟಿಸಿ ಮಾತನಾಡಿ, ಮಲಬಾರ ಗೋಲ್ಡ್ ಸಂಸ್ಥೆ ಪ್ರತಿ ವರ್ಷ ಬಡ ವಿದ್ಯಾರ್ಥಿನಿಯರಿಗೆ ಸ್ಕಾಲರಶಿಪ್ ವಿತರಣೆ ಮಾಡಿಕೊಂಡು ಬರುತ್ತಿರುವದು ಹೆಮ್ಮೆಯ ಸಂಗತಿ. ಸ್ಕಾಲರಶಿಪ್ ವಿತರಣೆಯಲ್ಲಿ ಯಾವುದೇ ಜಾತಿ, ಮತ, ಪಂಥ ಎಂಬ ಬೇದಭಾವ



ಮಾಡದೇ ಎಲ್ಲಾ ಸಮುದಾಯದ ವಿದ್ಯಾರ್ಥಿಗಳನ್ನು ಪರಿಗಣಿಸುತ್ತಿರುವದು ಮಾದರಿ ಕೆಲಸವಾಗಿದೆ. ಇದೇ ರೀತಿ ಮುಂಬರುವ ದಿನಗಳಲ್ಲಿ ಮತ್ತಷ್ಟು ಸಮಾಜಮುಖಿ ಕಾರ್ಯಗಳನ್ನು ಮಾಡುವಂತಾಗಲಿ ಮಲಬಾರಗೋಲ್ಡ್ ಸಂಸ್ಥೆ ಹಸಿದವರಿಗೆ ಆಹಾರ ನೀಡುವ ಪರಿಸರಕಾಳಜಿ, ವಿದ್ಯಾರ್ಥಿಗಳಿಗೆ ಶಿಷ್ಯವೇತನ ವಿತರಣೆಯಂತಹ ಸಾಮಾಜಿಕ ಕಾರ್ಯಗಳಿಂದ ಸಾಕಷ್ಟು ಹೆಸರುವಾಸಿಯಾಗಿದೆ. ಉದ್ಯಮದ ಜೊತೆಗೆ ಸಮಾಜಸೇವೆ ಮಾಡುತ್ತಿರುವ ಮಾದರಿ ಸಂಸ್ಥೆಯಾಗಿದೆ ಎಂದು ಶ್ಲಾಘಿಸಿದರು.

ಮಲಬಾರ ಚಾರಿಟೇಬಲ್ ಟ್ರಸ್ಟಿನ ಧ್ಯೇಯೋದ್ದೇಶಗಳ ಬಗ್ಗೆ ವಿವರಿಸಿದರು. ಇದಕ್ಕೂ ಮುನ್ನ ಗಣ್ಯರು ವಿದ್ಯಾರ್ಥಿನಿಯರಿಗೆ ಸ್ಕಾಲರಶಿಪ್ ವಿತರಣೆ ಮಾಡಿದರು.

ಇದೇ ಸಂದರ್ಭದಲ್ಲಿ ಸಮಾಜ ಸೇವಕರಾದ ರಾಜು ಬಿಜ್ಜರಗಿ, ರವಿ ಕಿತ್ತೂರ, ಸರಕಾರಿ ಪ್ರಥಮ ದರ್ಜೆ ಡಿಗ್ರಿ ಕಾಲೇಜಿನ ಪ್ರಾಂಶುಪಾಲ ರುದ್ರಯ್ಯ ಕಲ್ಲೂರಮಠ, ಸರಕಾರಿ ಪಿಯುಕಾಲೇಜಿನ ಸಿ.ಎಸ್. ನಾಟೀಕಾರ ಮತ್ತಿರರು ಇದ್ದರು.

ವಿವಿಧ ಕಾಲೇಜಿನ ಪ್ರಾಚಾರ್ಯರು, ವಿದ್ಯಾರ್ಥಿನಿಯರು, ಪಾಲಕರು ಹಾಗೂ ಮಲಬಾರಗೋಲ್ಡ್ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

# ರೋಣ ಹಾಗೂ ಗಜೇಂದ್ರಗಡ ತಾಲೂಕುಗಳ ಎಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕರುಗಳಿಗೆ ಒಂದು ದಿನದ ವಿಶೇಷ ತರಬೇತಿ ಶಿಬಿರ

**ಗದಗ:** ಸಹಕಾರ ಇಲಾಖೆ, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಗದಗ ಜಿಲ್ಲಾ ಸಹಕಾರ ಯೂನಿಯನ್ ನಿ., ಗದಗ ಹಾಗೂ ಧಾರವಾಡ ಹಾಲು ಒಕ್ಕೂಟ, ಧಾರವಾಡ ಇವರುಗಳ ಸಂಯುಕ್ತ ಆಶ್ರಯದಲ್ಲಿ ರೋಣ ಹಾಗೂ ಗಜೇಂದ್ರಗಡ ತಾಲೂಕುಗಳ ಎಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕರುಗಳಿಗೆ ಒಂದು ದಿನದ ವಿಶೇಷ ತರಬೇತಿ ಶಿಬಿರ ಗಜೇಂದ್ರಗಡದ ಜಗದಂಬಾ ದೇವಸ್ಥಾನ ಹತ್ತಿರ ಶ್ರೀ ಜಗದಂಬಾ ಸಮುದಾಯ ಭವನದಲ್ಲಿ ಜರುಗಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ಧಾರವಾಡ ಹಾಲು ಒಕ್ಕೂಟದ ಮಾಜಿ ಅಧ್ಯಕ್ಷರು ಹಾಗೂ ನಿರ್ದೇಶಕರಾದ ನೀಲಕಂಠ ಅಸೂಟಿ ರವರು ಮಾತನಾಡುತ್ತಾ ಇತ್ತೀಚಿಗೆ ಸದಸ್ಯರು ಉತ್ತಮ ಗುಣಮಟ್ಟದ ಹಾಲು ಉತ್ಪಾದನೆ ಮಡುವುದು ಹಾಗೂ ಒಕ್ಕೂಟದಿಂದ ಒದಗಿಸುತ್ತೀರುವ ಪಶು ಆಹಾರವನ್ನು ಹೆಚ್ಚು ಹೆಚ್ಚು ಬಳಸುವುದು ಸೂಕ್ತ ಎಂದು ಹೇಳಿದರು ಇದರಿಂದ ಸಂಘದ ಪ್ರಗತಿ ಹಾಗೂ ಒಕ್ಕೂಟದ ಪ್ರಗತಿ ಅಭಿವೃದ್ಧಿಯತ್ತ ಸಾಗಲು ಸಾಧ್ಯವಿದ್ದು ಇದಕ್ಕೆ ಸದಸ್ಯರುಗಳು ಸಹಕರಿಸಬೇಕೆಂದು ಕರೆಯಿತ್ತರು. ಈ ಮೂಲಕ ಗುಣಮಟ್ಟದ ಹಾಲು ಉತ್ಪಾದನೆಗೆ ಹೆಚ್ಚು ಪ್ರಾಮುಖ್ಯತೆ ನೀಡಬೇಕೆಂದು ವರ್ಗಿಸ್ ಕುರಿಯನ್ ಅವರ ದೂರದೃಷ್ಠಿಯ ಫಲವಾಗಿ ಭಾರತದಲ್ಲಿ ಹೈನುಗಾರಿಕೆ ಹಾಗೂ ಡೈರಿ ಉದ್ಯಮವು ಒಂದು ಸ್ವಾವಲಂಬಿ ಉದ್ಯಮವಾಗಿ ಬೆಳೆಯಿತು. ಡೈರಿ ಉದ್ಯಮವು ಗ್ರಾಮಿಣ ಭಾರತಿಯ ರೈತರಿಗೆ ಅದರಲ್ಲಿ ವಿಶೇಷವಾಗಿ ಹೆಣ್ಣುಮಕ್ಕಳಿಗೆ ಹಣ ಸಂಪಾದನೆಯ ಒಂದು ಸ್ಥಿರ ಮೂಲವಾಯಿತು ಮತ್ತು ರಾಷ್ಟ್ರದ ಆರ್ಥಿಕತೆ ರೂಪಿಸುವ ಗ್ರಾಮೀಣ ಉದ್ಯಮವಾಯಿತು. ರೈತರಿಗೆ ನಿಗದಿತ ಆದಾಯವು ದೊರೆಯುತ್ತಿದ್ದ ಕಾರಣ ಅನೇಕರು ಸಾಲದ ವಿಷವರ್ತುಲದಿಂದ ಮಕ್ತರಾಗಲು ಒಂದು ದಾರಿಯಾಯಿತು ಭಾರತದಲ್ಲಿ ಗುಜರಾತಿನ ಅಮುಲ್ (ಆನಂದ ಮಿಲ್ಕ್ ಯೂನಿಯನ್ ಲಿ.,) ಬಿಟ್ಟರೆ ಕರ್ನಾಟಕದ ಕೆ.ಎಂ.ಎಫ್-ನಂದಿನಿ ಅತ್ಯಂತ ದೊಡ್ಡ ಹಾಲು ಉತ್ಪಾದಕರ ಸಂಘಟನೆ, ಅದಕ್ಕೆ ಕರ್ನಾಟಕದಲ್ಲಿ ಹಾಲು ಎಂದರೆ ನೆನೆಪಾಗುವುದು ನಂದಿನಿ. ಇದು ಕನ್ನಡಿಗರ ಅತ್ಯಂತ ಭಾವನಾತ್ಮಕ ಹೆಮ್ಮೆಯ ಸಂಸ್ಥೆಯಾಗಿದೆ ಎಂದರು.

ಧಾರವಾಡ ಹಾಲು ಒಕ್ಕೂಟದ ನಿವೃತ್ತ ಸಹಾಯಕ ವ್ಯವಸ್ಥಾಪಕರಾದ ಡಿ. ಎಸ್. ಆಶಿ ರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ಒಕ್ಕೂಟವು ಚೆನ್ನಾಗಿದ್ದರೆ ಸಹಕಾರ ಸಂಘಗಳು ಚೆನ್ನಾಗಿರುತ್ತವೆ. ಹಾಲು ಮಹಾಮಂಡಳದ ವ್ಯಾಪ್ತಿಯಲ್ಲಿ ಇರುವ 8 ಪಶು ಆಹಾರ ಘಟಕಗಳು ಕಾರ್ಯಚರಣೆಯಲ್ಲಿದ್ದು, ಇವುಗಳಲ್ಲಿ ಪ್ರತಿ ತಿಂಗಳು 75000 ಮೆಟ್ರಿಕ್ ಟನ್ ಪಶು ಆಹಾರ ಉತ್ಪಾದಿಸಿ ಬೇಡಿಕೆ ಅನುಸಾರ ಮಾರಾಟ ಮಾಡಲಾಗುತ್ತಿದೆ. ಕೆ.ಎಂ. ಎಫ್ ಮತ್ತು ಜಿಲ್ಲಾ ಹಾಲು ಒಕ್ಕೂಟಗಳ ಮೂಲಕ ಹಾಲು ಉತ್ಪಾದಕರಿಗೆ ಪಶು ವೈದ್ಯಕೀಯ ಸೌಲಭ್ಯ ವಿವಿಧ ರೀತಿಯ ಮೇವಿನ ಬೀಜಗಳು, ರಾಸುಗಳ ಗುಂಪು ವಿಮೆ, ಲಸಿಕೆ ಕಾರ್ಯಕ್ರಮಗಳನ್ನು ಶೇ 50 ರಷ್ಟು ಅನುದಾನದಲ್ಲಿ ನೀಡಲಾಗುತ್ತಿದೆ ಇವೆಲ್ಲವುಗಳ ಸದುಪಯೂಗ ಪಡೆದುಕೊಂಡು ಸಹಕಾರ ಸಂಘಗಳು ಚೆನ್ನಾಗಿದ್ದರೆ ಹಾಲು ಉತ್ಪಾದಕರು ಚೆನ್ನಾಗಿರುತ್ತಾರೆ ಇಡೀ ಭಾರತದಲ್ಲಿ ನಂದಿನಿ ಎರಡನೇ ಸ್ಥಾನದಲ್ಲಿದೆ. ಇದಕ್ಕೆ ರೈತರು ಹಾಗೂ ಅಧಿಕಾರಿಗಳು ಕಾರಣವಾಗಿದ್ದಾರೆ ಎಂದು ಹೇಳಿದರು.

ಧಾರವಾಡ ಹಾಲು ಒಕ್ಕೂಟದ ಗದಗ ಜಿಲ್ಲೆಯ ಮುಖ್ಯಸ್ಥರಾದ ಡಾ. ಪ್ರಸನ್ ಎಸ್. ಪಟ್ಟೇದ ರವರು ಮಾತನಾಡುತ್ತಾ ಹಸಿರೇ ಉಸಿರು ಎಂಬಂತೆ ಭೂಮಿಯಲ್ಲಿ ಅನೇಕ ನೈಸರ್ಗಿಕ ಸಂಪನ್ಮೂಲಗಳಿವೆ ಸಾವಯವ ಕೃಷಿಯಿಂದ ಕಡಿಮೆ ಖರ್ಚಿನಲ್ಲಿ ಹೆಚ್ಚಿನ ಲಾಭ ಪಡೆಯಲು ಅನೂಕೂಲವಾಗುತ್ತದೆ. ಧನಕರುಗಳ ಗೋಮೂತ್ರ ಮತ್ತು ಸಗಣಿಯಿಂದ ಗೊಬ್ಬರವನ್ನು ತಯಾರಿಸಿ ಹೊಲಕ್ಕೆ ಹಾಕುವುದರಿಂದ ಉತ್ತಮವಾದ ಫಲವತ್ತತೆ ಬರುತ್ತದೆ ಇದರಿಂದ ರೈತರಿಗೆ ಬಹಳ ಅನುಕೂಲವಿದೆ ಮತ್ತು ಪಶುಗಳಿಗೆ ಉತ್ತಮವಾದ ಆಹಾರವನ್ನು ನೀಡುವುದರಿಂದ ಹಾಲಿನ ಉತ್ಪಾದನೆ ಇನ್ನೂ ಹೆಚ್ಚುತ್ತದೆ ಎಂದು ಹೇಳಿದರು.

ರೋಣ ಹಾಗೂ ಗಜೇಂದ್ರಗಡ ಹಾಲು ಒಕ್ಕೂಟದ ವಿಸ್ತರಣಾಧಿಕಾರಿಗಳಾದ ಜಿ. ಸಿ. ಸಾಲೋಟಗಿಮಠ ಹಾಗೂ ಮಲ್ಲಿಕಾರ್ಜುನ ಉನಚಗೇರಿ ಜಗದಂಬಾ ಕೋ-ಆಪ್ ಕ್ರೆಡಿಟ್ ಸೊಸೈಟಿಯ ಮುಖ್ಯ ಕಾರ್ಯನಿರ್ವಾಹಕರಾದ ಭಾಸ್ಕರಸಾ ಅರ್ಜುನಸಾ ಶಿಂಗರಿ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಆಯ್ದ ಉತ್ತಮ ಹಾಲು ಸಹಕಾರ ಸಂಘಗಳಿಗೆ ಗೌರವಿಸಿ ಸನ್ಮಾನಿಸಲಾಯಿತು.

# ಶಿವಪುರ ಮೀನು ಮರಿ ಉತ್ಪಾದನ ಪಾಲನಾ ಕೇಂದ್ರ ಹಾಗೂ ಹಣ್ಣು ಮತ್ತು ಜೇನು ಮೇಳಕ್ಕೆ ಸಿ.ಇ.ಓ.ಭೇಟಿ

**ಕೊಪ್ಪಳ :** ಶಿವಪುರದ ಬೋರುಕಾ ಹತ್ತಿರ ಇರುವ ಮೀನು ಮರಿ ಉತ್ಪಾದನ ಪಾಲನಾ ಕೇಂದ್ರಕ್ಕೆ ಕೊಪ್ಪಳ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯ ನಿರ್ವಹಣ ಅಧಿಕಾರಿ ರಾಹುಲ್ ರತ್ನಂ ಪಾಂಡೆಯ ಅವರು ಮಂಗಳವಾರ ಭೇಟಿ ನೀಡಿದರು.

ಮೀನುಗಾರಿಕೆ ಇಲಾಖೆಯ ಅಧಿಕಾರಿಗಳಿಗೆ ಮೀನು ಮರಿ ಉತ್ಪಾದನಾ ಪಾಲನಾ ಕೇಂದ್ರವನ್ನು ಅಭಿವೃದ್ಧಿಪಡಿಸಲು ಸಮಗ್ರ ಯೋಜನೆ ರೂಪಿಸುವಂತೆ ಸೂಚಿಸಿದ ಸಿಇಓ ಅವರು, ಅಲ್ಲಿನ ಮೂಲಭೂತ ಸೌಲಭ್ಯ ಹಾಗೂ ಮೀನು ಮರಿ ಉತ್ಪಾದನೆಯನ್ನು ಪರಿಶೀಲಿಸಿ, ಈ ಕೇಂದ್ರಕ್ಕೆ ಅವಶ್ಯವಿರುವ ಕಾಮಗಾರಿಗಳ ಪಟ್ಟಿಯನ್ನು ಸಿದ್ದಪಡಿಸಿದಲ್ಲಿ ಜಿಲ್ಲಾ ಪಂಚಾಯತಿ, ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯ ಅನುದಾನದಡಿ ಕಾಮಗಾರಿಗಳನ್ನು ಕ್ರಿಯಾ ಯೋಜನೆಯಲ್ಲಿ ಅಳವಡಿಸಿ ಅಭಿವೃದ್ಧಿಪಡಿಸಲಾಗುವದು ಹಾಗೂ ಇಲಾಖೆಯಿಂದ ಆಗಬೇಕಾಗಿರುವ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಆಯುಕ್ತರ ಕಛೇರಿಯಿಂದ ಅನುಮೋದನೆ ಪಡೆಯಲು ಕ್ರಮವಹಿಸುವಂತೆ



ಮೀನುಗಾರಿಕೆ ಇಲಾಖೆಯ ಉಪ ನಿರ್ದೇಶಕರಿಗೆ ಸೂಚಿಸಿದರು.

ಬರುವ 2 ವರ್ಷದೊಳಗಾಗಿ ಮಾದರಿ ಮೀನು ಮರಿ ಉತ್ಪಾದನಾ ಪಾಲನಾ ಕೇಂದ್ರವನ್ನಾಗಿ ನಿರ್ಮಿಸಿ ಈ ಭಾಗದ ಅತೀ ದೊಡ್ಡ ಮೀನು ಮರಿ ಉತ್ಪಾದನಾ ಕೇಂದ್ರವಾಗಿಸಬೇಕು. ಈ ಮುಂಚೆ ಇದ್ದ ಮೀನು ಮರಿ ಉತ್ಪಾದನೆ ಮಾದರಿ ಕೇಂದ್ರವನ್ನಾಗಿ ಮಾರ್ಪಡಿಸಲಾಗುವದು ಎಂದರು.

ಈ ಸಂದರ್ಭದಲ್ಲಿ ಮೀನುಗಾರಿಕೆ ಇಲಾಖೆಯ ಉಪ ನಿರ್ದೇಶಕರಾದ ಭಾಗ್ಯಶ್ರೀ, ತಾಲೂಕ ಪಂಚಾಯತ ಕಾರ್ಯ ನಿರ್ವಾಹಕ ಅಧಿಕಾರಿ ದುಂಡಪ್ಪ ತುರಾದಿ, ಮೀನುಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕ ರಜನೀಶ್, ಬಸವರಾಜ, ಗ್ರಾಮ ಪಂಚಾಯತ ಅಧ್ಯಕ್ಷ ರವಿಕುಮಾರ ಚೆಲಸಾನಿ,
ಉಪಾಧ್ಯಕ್ಷ ವೆಂಕಟೇಶ ಚನ್ನದಾಸರ, ಸದಸ್ಯ ಶೇಷನಗೌಡ, ಪಿಡಿಓ ಮಂಜುಳಾ ಪಾಟೀಲ್, ತಾಲೂಕ ಐ.ಇ.ಸಿ ಸಂಯೋಜಕ ದೇವರಾಜ ಪತ್ತಾರ ಹಾಗೂ ಇತರರು ಉಪಸ್ಥಿತಿತರಿದ್ದರು.

ಹಣ್ಣು ಮತ್ತು ಜೇನು ಮೇಳಕ್ಕೆ ಭೇಟಿ: ಕೊಪ್ಪಳ ನಗರದಲ್ಲಿ ತೋಟಗಾರಿಕೆ ಇಲಾಖೆಯ ವತಿಯಿಂದ ಮಹಾ ಶಿವರಾತ್ರಿ ಪ್ರಯುಕ್ತ ಏರ್ಪಡಿಸಲಾದ ವಿವಿಧ ಹಣ್ಣುಗಳ ಮತ್ತು ಜೇನು ಮೇಳಕ್ಕೆ ಸಿಇಓ ಅವರು ಭೇಟಿ ನೀಡಿ, ಮೇಳದಲ್ಲಿ ರೈತರು ಬೆಳೆದ ದ್ರಾಕ್ಷಿ, ಜೇನು, ದಾಳಿಂಬೆ ಇತ್ಯಾದಿ ಹಣ್ಣುಗಳ ಮಾರಾಟದ ಕುರಿತು ರೈತರು ಮತ್ತು ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕರೊಂದಿಗೆ ಚರ್ಚಿಸಿದರು. ಈ ವೇಳೆ ತೋಟಗಾರಿಕೆ ಇಲಾಖೆಯ ಅಧಿಕಾರಿ ಸಿಬ್ಬಂದಿ ಇದ್ದರು.

### ಜಿಲ್ಲಾ ಮಕ್ಕಳ ರಕ್ಷಣಾ ಘಟಕ: ವಿಭಾಗ ಮಟ್ಟದ ಕಾರ್ಯಾಗಾರ

# ಮಕ್ಕಳ ಸಂರಕ್ಷಣೆ ನಮ್ಮೆಲ್ಲರ ಕರ್ತವ್ಯ: ಕೆ. ನಾಗಣ್ಣ ಗೌಡ



**ಬೆಳಗಾವಿ :** ಮಕ್ಕಳ ಸಂರಕ್ಷಣೆಯ ವಿಶೇಷ ಕಾಯ್ದೆಗಳಾದಪೋಕ್ಸೋ,ಉಚಿತಮತ್ತುಕಡ್ಡಾಯ ಶಿಕ್ಷಣ,ಬಾಲ್ಯವಿವಾಹನಿಷೇಧ,ಬಾಲಕಾರ್ಮಿಕ ಪದ್ಧತಿ ನಿಷೇಧ,ಹೆಣ್ಣು ಭ್ರೂಣ ಹತ್ಯೆ,ಭ್ರೂಣ ಪತ್ತೆ ನಿಷೇಧಕಾಯ್ದೆಗಳಪರಿಣಾಮಕಾರಿಅನುಷ್ಠಾನಕ್ಕೆ ಎಲ್ಲ ಅಧಿಕಾರಿಗಳು ಕಾರ್ಯನಿರ್ವಹಿಸಬೇಕು. ಮಕ್ಕಳು ದೇಶದ ಆಸ್ತಿ, ಅವರ ರಕ್ಷಣೆ, ಸುರಕ್ಷತೆ ನಮ್ಮೆಲ್ಲರ ಜವಾಬ್ದಾರಿ ಎಂದು ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ಆಯೋಗದ ಅಧ್ಯಕ್ಷ ಕೆ. ನಾಗಣ್ಣ ಗೌಡ ಅವರು ತಿಳಿಸಿದರು.

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ಆಯೋಗ ಬೆಂಗಳೂರು, ಮಕ್ಕಳ ರಕ್ಷಣಾ ನಿರ್ದೇಶನಾಲಯ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಾಲಾ ಶಿಕ್ಷಣ ಇಲಾಖೆ, ಪೊಲೀಸ್ ಇಲಾಖೆ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಇವರ ಸಂಯುಕ್ತಾಶ್ರಯದಲ್ಲಿ ಸುವರ್ಣ ವಿಧಾನಸೌಧ ಸೆಂಟ್ರಲ್ ಹಾಲ್ ನಲ್ಲಿ ಶನಿವಾರ (ಮಾ.01) ನಡೆದ "ಮಕ್ಕಳ ರಕ್ಷಣಾ ಕಾಯ್ದೆಗಳ ಅನುಷ್ಠಾನಗೊಳಿಸುವಲ್ಲಿ ಅಧಿಕಾರಗಳ ಪಾತ್ರ" ಕುರಿತು ಬೆಳಗಾವಿ ವಿಭಾಗ ಮಟ್ಟದ ತರಬೇತಿ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಎಲ್ಲವಲಯಗಳಲ್ಲಿ ಮಕ್ಕಳಿಗೆ ರಕ್ಷಣೆ ಒದಗಿಸಲು ಪ್ರತಿ ಇಲಾಖೆ ಕಾರ್ಯ ನಿರ್ವಹಿಸಬೇಕು. ಮೂರು ತಿಂಗಳಲ್ಲಿ ಕನಿಷ್ಠ ಒಂದು ಬಾರಿ ಮಕ್ಕಳ ರಕ್ಷಣೆ ಕುರಿತು ಸಭೆಗಳನ್ನು ಆಯೋಜಿಸಬೇಕು. ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಕಡ್ಡಾಯವಾಗಿಸಭೆಗಳಿಗೆಹಾಜರಿರಬೇಕು.ಅದೇ ರೀತಿಯಲ್ಲಿರಕ್ಷಣಾಸಮಿತಿಗಳಸಹಯೋಗದಲ್ಲಿ ವ್ಯಾಪಕ ಜಾಗೃತಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು ಎಂದು ಹೇಳಿದರು.

ಮಾದಕ ದ್ರವ್ಯ, ಮೊಬೈಲ್ ವ್ಯಸನ ಎಲ್ಲವನ್ನೂ ಮಕ್ಕಳಿಂದ ದೂರ ಇರಿಸಬೇಕು. ಮಕ್ಕಳಗೆ ಹೊರಾಂಗಣ ಕ್ರೀಡಾ ಚಟುವಟಿಕೆಗಳು ಸೂಕ್ತ ಆದರೆ ಬದಲಿಗೆ ಮೊಬೈಲ್, ಟಿವಿ ವ್ಯಸನಿಗಳಾಗಿ ಬದಲಾಗದಂತೆ ನೋಡಿಕೊಳ್ಳಬೇಕು.

**ಕ್ರೀಡಾ ಚಟುವಟಿಕೆಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು:**

ಮಕ್ಕಳ ದೈಹಿಕ, ಮಾನಸಿಕ ಬೆಳವಣಿಗೆಗೆ ಪ್ರತಿ ಶಾಲೆಗಳಲ್ಲಿ ಆಟಗಳಲ್ಲಿ ಸಮಯ ನಿಗದಿಪಡಿಸುವಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಾಲೆಗಳಿಗೆ ಸೂಚಿಸಬೇಕು. ಪ್ರತಿ ಶಾಲೆಗಳಲ್ಲಿ ಮಕ್ಕಳ ಸಹಾಯವಾಣಿ ಫಲಕ ಕಡ್ಡಾಯವಾಗಿ ಅಳವಡಿಸಬೇಕು. ಮಕ್ಕಳಿಗೆ ತೊಂದರೆ ಎದುರಾದಲ್ಲಿ ತುರ್ತಾಗಿ ಸೇವೆ ಒದಗಿಸಬೇಕು ಎಂದು ಕೆ. ನಾಗಣ್ಣಗೌಡ ಸೂಚನೆ ನೀಡಿದರು.

ಕಾಯ್ದೆಗಳಅನುಷ್ಠಾನದಜೊತೆಗೆಮುನ್ನೆಚ್ಚರಿಕಾ ಕ್ರಮವಾಗಿ ಯಾವುದೇ ತೊಂದರೆಯಾಗದಂತೆ ಜಾಗೃತಿ ಅಭಿಯಾನಗಳನ್ನು ಹಮ್ಮಿಕೊಳ್ಳಬೇಕು. ಅಧಿಕಾರಿಗಳು ಮಕ್ಕಳ ರಕ್ಷಣೆ ವಿಷಯದಲ್ಲಿ ನಿರ್ಲಕ್ಷ್ಯ ತೋರಿದೆ ಜವಾಬ್ದಾರಿಯುತವಾಗಿ ಕರ್ತವ್ಯ ನಿರ್ವಹಿಸಬೇಕು ಎಂದರು.

**ಜಾಗೃತಿ ಅಭಿಯಾನ ಹೆಚ್ಚಿಸಿ:**

ವಿವಾಹ ವಯೋಮಿತಿ ಸರ್ಕಾರದ ನಿಗದಿ ಅನ್ವಯವಿರಬೇಕು. ಒಂದುವೇಳೆ ಬಾಲ್ಯ ವಿವಾಹವಾಗಿ ಗರ್ಭವಸ್ಥೆಯಲ್ಲಿದ್ದರೆ ಡಾಕ್ಟರ್ ಗಳ ಗಮನಕ್ಕೆ ಬಂದ ತಕ್ಷಣವೇ ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ತರಬೇಕು ಎಂದು ಹೇಳಿದರು.

ಅಂಗನವಾಡಿ ಕಾರ್ಯಕರ್ತರ ಮೂಲಕ ಪ್ರತಿ ಗ್ರಾಮಗಳಲ್ಲಿ ಮನೆ ಮನೆಗೆ ತೆರಳಿ ಜಾಗೃತಿ ಅಭಿಯಾನ ಹಮ್ಮಿಕೊಳ್ಳಬೇಕು. ಈ ನಿಟ್ಟಿನಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಸೂಚನೆ ನೀಡಬೇಕು.

ಮಕ್ಕಳ ರಕ್ಷಣೆಗೆ ನಿರಂತರ ದಾಳಿಗಳನ್ನು ಹಮ್ಮಿಕೊಳ್ಳಬೇಕು. ಮಕ್ಕಳ ರಕ್ಷಣೆಯ ನಂತರ ರಕ್ಷಣೆಯಾದ ಮಗು ವ್ಯವಸ್ಥಿತ ಹಂತಕ್ಕೆ ಬರೋವರೆಗೂಮಕ್ಕಳನ್ನುನೋಡಿಕೊಳ್ಳಬೇಕು. ಮಕ್ಕಳ ಗ್ರಾಮ ಸಭೆಯಲ್ಲಿ ಶಾಲೆಗಳಿಗೆ ಸರಿಯಾದ ಸಮಯಕ್ಕೆ ತಲುಪುವಂತೆ ಮಕ್ಕಳಿಗೆ ಬಸ್ ವ್ಯವಸ್ಥೆ, ರಕ್ಷಣೆ, ಹಕ್ಕುಗಳ ಉಲ್ಲಂಘನೆ ಸೇರಿದಂತೆ ಮಕ್ಕಳ ಸಂರಕ್ಷಣೆಯ ಕುರಿತು ಕಡ್ಡಾಯವಾಗಿ ಚರ್ಚೆಗಳಾಗಬೇಕು ಎಂದು ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ಆಯೋಗದ ಅಧ್ಯಕ್ಷ ಕೆ. ನಾಗಣ್ಣ ಗೌಡ ಹೇಳಿದರು.

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ಆಯೋಗ ಸದಸ್ಯೆ ಅಪರ್ಣಾ ಕೊಳ್ಳಾ ಮಾತನಾಡಿ, ಮಕ್ಕಳ ಹಕ್ಕುಗಳನ್ನುಸುಲಭವಾಗಿಅನುಷ್ಠಾನಗೊಳಿಸಲು ಕಾಯ್ದೆಗಳನ್ನು ಅರಿತುಕೊಳ್ಳಬೇಕು. ಚಿಕ್ಕೋಡಿಯಲ್ಲಿ ಮಕ್ಕಳ ರಕ್ಷಣೆಗಳ ಕುರಿತು ನೂತನವಾಗಿ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಪ್ರತಿಯೊಬ್ಬ ಅಧಿಕಾರಿಗಳು ರಕ್ಷಣೆಗೊಂಡ ಮಕ್ಕಳ ಮೇಲೆ ನಿಗಾ ವಹಿಸಬೇಕು. ಇದರಿಂದ ಅಂತಹ ಮಕ್ಕಳಿಗೆ ಉತ್ತಮ ಭವಿಷ್ಯ ರೂಪಿಸಿ ಕೊಡಬಹುದು ಎಂದು ಹೇಳಿದರು.

ಎಲ್ಲ ಅಧಿಕಾರಿಗಳು ಸಂಘಟಿತವಾಗಿ ಕಾರ್ಯ ನಿರ್ವಹಿಸಬೇಕು. ಬಾಲ್ಯ ವಿವಾಹ, ಪೋಕ್ಸೋ ಪ್ರಕರಣಗಳ ಮಾಹಿತಿ ಗಮನಿಸಿದಾಗ ಸರ್ಕಾರಿ ಶಾಲೆಯಲ್ಲಿ ಓದುತ್ತಿರುವ 7 ರಿಂದ 8 ಮಕ್ಕಳಿಗೆ ತೊಂದೆಯಾಗಿದೆ.

ಸರ್ಕಾರಿ ಶಾಲೆಗಳ ಮಕ್ಕಳು 7 ದಿನಗಳ ಕಾಲ ನಿರಂತರವಾಗಿ ಶಾಲೆಗೆ ಬಾರದೆ ಹೋದರೆ ಅಂತಹ ಮಕ್ಕಳ ಮಾಹಿತಿ ಪಡೆದು ಮಕ್ಕಳ ರಕ್ಷಣಾ ಘಟಕಕ್ಕೆ ಸಲ್ಲಿಸಬೇಕು. ಪೋಕ್ಸೋ ಪ್ರಕರಣಗಳಲ್ಲಿ ಕೆಲವು ಇಲಾಖೆಗಳು ದೂರು ದಾಖಲಿಸಿದ ಉದಾಹರಣೆಗಳೆ ಇಲ್ಲ.

ಸರ್ಕಾರಿ ಶಾಲೆಯಲ್ಲಿ ಶಾಲೆ ಬಿಟ್ಟುಹೋದ ಮಕ್ಕಳ ಮಾಹಿತಿ ಕಲೆಹಾಕಬೇಕು. ಮಕ್ಕಳ ಮೇಲಿನ ದೌರ್ಜನ್ಯ ಸಮಾಜದ ಅತೀ ಕೆಟ್ಟ ಪಿಡುಗು. ಮಕ್ಕಳ ಮೇಲಾಗುತ್ತಿರುವ ದೌರ್ಜನ್ಯಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಎಲ್ಲ ಇಲಾಖೆಗಳು ಸಮನ್ವಯದೊಂದಿಗೆ ಕಾರ್ಯನಿರ್ವಹಿಸಬೇಕು ಎಂದು ಅಪರ್ಣಾ ಕೊಳ್ಳಾ ಅವರು ತಿಳಿಸಿದರು.

**ಮಕ್ಕಳ ಸಾಗಾಣಿಕೆಗೆ ಕಡಿವಾಣ ಅಗತ್ಯ:**

ಗಡಿ ಭಾಗಗಳಲ್ಲಿ ಅನೈತಿಕವಾಗಿ ಮಕ್ಕಳ ಸಾಗಾಣಿಕೆ ಪ್ರಕರಣಗಳು ಕಂಡು ಬರುತ್ತಿವೆ. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮಕ್ಕಳ ಅಪಹರಣ, ಸಾಗಾಣಿಕೆ ಪ್ರಕರಣಗಳು ದಾಖಲಾಗಿವೆ.

ರಾಜ್ಯದಲ್ಲಿ4ಸಾವಿರ39ಪಾಲಕರುಮಕ್ಕಳಬೇಕು ಎಂಬ ಅರ್ಜಿಗಳು ಬಂದಿವೆ. ಅಂತಹದರಲ್ಲಿ ಮಕ್ಕಳ ಮಾರಾಟ, ಸಾಗಾಣಿಕೆಗೆ ಮುಖ್ಯವಾಗಿ ಕಡಿವಾಣ ಹಾಕಿ ಅವರ ಭವಿಷ್ಯ ರೂಪಿಸಬೇಕಿದೆ ಎಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಶಶಿಧರ ಕೋಸಂಬೆ ಹೇಳಿದರು.

ಕೆಲವು ಜಿಲ್ಲೆಗಳ ಆಸ್ಪತ್ರೆಗಳಲ್ಲಿ ಭ್ರೂಣ ಹತ್ಯೆ, ಗರ್ಭಪಾತಪ್ರಕರಣಗಳುಕಂಡುಬಂದಿವೆ.ಮಕ್ಕಳ ರಕ್ಷಣೆಗೆ ಅಧಿಕಾರಿಗಳ ಜೊತೆಗೆ ಸಾರ್ವಜನಿಕ ಸಹಭಾಗಿತ್ವದ ಜವಾಬ್ದಾರಿ ತೆಗೆದುಕೊಳ್ಳಬೇಕು. ಮಹರಾಷ್ಟ್ರ, ಗೋವಾ ರಾಜ್ಯಗಳಿಗೆ ಮಕ್ಕಳ ಸಾಗಾಣಿಕೆಯಾಗುತ್ತಿವೆ ಇದರ ಕಡಿವಾಣಕ್ಕೆ ಮೇಲುಸ್ತುವಾರಿ ಅಧಿಕಾರಿಗಳು ನಿರಂತರ ಕಾರ್ಯಾಚರಣೆ ನಡೆಸಬೇಕು.

**ವಿದ್ಯಾರ್ಥಿವೇತನ;ತಾಂತ್ರಿಕದೋಷನಿವಾರಣೆಗೆ ಅಧಿಕಾರಿಗಳ ಜವಾಬ್ದಾರಿ:**

ಬಾಲ್ಯವಿವಾಹ ನಿಷೇಧ ಕಾಯ್ದೆ ಪರಿಣಾಮಕಾರಿ ಅನುಷ್ಠಾನಕ್ಕೆ ಅಧಿಕಾರಿಗಳು ಇನ್ನಷ್ಟು ಕೆಲಸ ಮಾಡಬೇಕಿದೆ. ಜಾಗೃತಿ, ಅರಿವು ಅಭಿಯಾನಗಳನ್ನು ಹೆಚ್ಚಾಗಿ ಹಮ್ಮಿಕೊಂಡು ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು. ಅಧಿಕಾರಿಗಳುಮಕ್ಕಳಕಾನೂನಾತ್ಮಕಪೋಷಕರು ಹಾಗಾಗಿ ಅಧಿಕಾರಿಗಳು ಪ್ರಕರಣ ದಾಖಲಿಸಲು ಹಿಂದೇಟು ಹಾಕಬಾರದು ಎಂದು ತಿಳಿಸಿದರು.

ವಿದ್ಯಾರ್ಥಿವೇತನಕ್ಕಾಗಿಬಹಳಷ್ಟುವಿದ್ಯಾರ್ಥಿಗಳ ಆಧಾರ್-ಬ್ಯಾಂಕ್ಖಾತೆಗೆಜೋಡಣೆಯಾಗಿಲ್ಲ. ಇದು ವಿದ್ಯಾರ್ಥಿಗಳ ಜವಾಬ್ದಾರಿಯಲ್ಲ. ಶಿಕ್ಷಣ ಇಲಾಖೆ ಅಧಿಕಾರಿಗಳು ಖುದ್ದಾಗಿ ಅಂತಹ ಮಕ್ಕಳನ್ನು ಪಟ್ಟಿ ಮಾಡಿ ಆಧಾರ-ಬ್ಯಾಂಕ್ ಖಾತೆಗೆ ಜೋಡಣೆ ಮಾಡಿಸುವುದು ಅಧಿಕಾರಿಗಳ ಜವಾಬ್ದರಿಯಾಗಿದೆ ಎಂದು ಶಶಿಧರ ಕೋಸಂಬೆ ಹೇಳಿದರು.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪಿ. ಮುರಳಿ ಮೋಹನ ರೆಡ್ಡಿ ಮಾತನಾಡಿ, ಮಕ್ಕಳು ಹೆಚ್ಚಾಗಿ ಮೊಬೈಲ್-ಟಿವಿ ವ್ಯಸನಿಗಳಾಗಿದ್ದಾರೆ ಅವರಿಗೆ ತಿಳಿಹೇಳುವ ಕೆಲಸವಾಗಬೇಕು ಎಂದರು.

ಕರ್ನಾಟಕ ಸರ್ಕಾರದ ಯೋಜನೆಯಾದ "ಸಂತ್ರಸ್ತರ ಪರಿಹಾರ ಯೋಜನೆ" ಮೂಲಕ ಪೋಕ್ಸೋ ಸಂತ್ರಸ್ತರು, ಎಸ್.ಸಿ ಎಸ್.ಟಿ ವರ್ಗದ ಸಂತ್ರಸ್ತರಿಗೆ ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ಪರಿಹಾರ ಒದಗಿಸಲಾಗುವುದು ಈ ಕುರಿತು ಅಧಿಕೃತ ವೆಬ್ ಸೈಟ್ ಗೆ ಭೇಟಿ ನೀಡಿ ಅಧಿಕಾರಿಗಳು ಮಾಹಿತಿ ಪಡೆದುಕೊಳ್ಳಬೇಕು.

**ಸಂತ್ರಸ್ತರ ಪರ ಉಚಿತ ಕಾನೂನು ಸೇವೆ:**

ಪರಿಹಾರ ವಿತರಣೆಯಲ್ಲಿ ಎರಡು ವಿಧಗಳಿವೆ ಮಧ್ಯಂತರ ಪರಿಹಾರ ಮತ್ತು ಕೊನೆಯ ಪರಿಹಾರ ಇದಕ್ಕೆ ಸಂತ್ರಸ್ತರು ಕಡ್ಡಾಯವಾಗಿ ಪೊಲೀಸ್ ತನಿಖೆಗೆ ಸಹಕಾರ ನೀಡಬೇಕು. ನ್ಯಾಯಾಲಯದಲ್ಲಿ ಸರಿಯಾದ ಹೇಳಿಕೆ ನೀಡಬೇಕು. ಅವರಿಗೆ ಸಂಪೂರ್ಣ ರಕ್ಷಣೆ ಜವಾಬ್ದಾರಿಯನ್ನು ನೀಡಲಾಗುವುದು.

ಕಾನೂನು ಸಮಸ್ಯೆಗಳಿದ್ದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಿಂದ ಉಚಿತ ಕಾನೂನು ಸೇವೆಗಳನ್ನು ಒದಗಿಸಲಾಗುವುದು. ಮಕ್ಕಳ ರಕ್ಷಣೆ ಪೊಲೀಸ್ ಇಲಾಖೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕೆಲಸ ಮಾತ್ರವಲ್ಲ, ಸಂಬಂಧಿಸಿದ ಎಲ್ಲ ಇಲಾಖೆಗಳು ಮಕ್ಕಳ ರಕ್ಷಣೆಗೆ ಮುಂದಾಗಬೇಕು ಎಂದು ಪಿ. ಮುರಳಿ ಮೋಹನ್ ರೆಡ್ಡಿ ಅವರು ಹೇಳಿದರು.

**ಕಡ್ಡಾಯ ದೂರು ದಾಖಲಿಸಲು ಅಧಿಕಾರಿಗಳಿಗೆ ಸೂಚನೆ:**

ಮಕ್ಕಳ ಹಕ್ಕುಗಳ ರಕ್ಷಣಾ ಕಾಯ್ದೆಯಡಿಯಲ್ಲಿ ಅಧಿಕಾರಿಗಳು ಕೆಲಸ ಮಾಡಬೇಕು. ಮಕ್ಕಳ ರಕ್ಷಣೆಯ ನಂತರ ಪ್ರಕರಣ ದಾಖಲಿಸುವುದು ಅಧಿಕಾರಿಗಳ ಸವಾಲಿನ ಕೆಲಸವಾಗಿದೆ. ಯಾವುದೇ ಒತ್ತಡಕ್ಕೆ ಮಣಿಯದೇ ಕಾನೂನು ಪೊಲೀಸ್ಇಲಾಖೆನೆರವುಪಡೆದುಧೈರ್ಯವಾಗಿ ಪ್ರಕರಣ ದಾಖಲಿಸಲು ಮುಂದಾಗಬೇಕು ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ತಿಳಿಸಿದರು.

ಅಧಿಕಾರಿಗಳ ವ್ಯಾಪ್ತಿಯಲ್ಲಿರುವ ಮಕ್ಕಳ ರಕ್ಷಣೆ ಪ್ರತಿಯೊಬ್ಬಅಧಿಕಾರಿಯಜವಾಬ್ದಾರಿಯಾಗಿದೆ. ಕೆಲವು ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನ ಪಡೆಯಲು ಬ್ಯಾಂಕ್ ಆಧಾರ ಜೋಡಣೆ ಆಗಬೇಕಿದೆಇದಕ್ಕಾಗಿಈಗಾಗಲೇಸಂಬಂಧಿಸಿದ ಇಲಾಖೆಗೆ ಸೂಚನೆ ನೀಡಲಾಗಿದೆ.

ಬಾಲಕಿಯರು ಪ್ರೌಢಾವಸ್ಥೆಯಲ್ಲಿ ಗರ್ಭಿಣಿಯಾದ ಪ್ರಕರಣಗಳು ಕಂಡು ಬಂದರೆ ಅವರ ರಕ್ಷಣೆ ಬಹಳ ಕಷ್ಟಕರ. ಅಂತಹ ಮಕ್ಕಳ ಪರಿಸ್ಥಿತಿ ನಿಜಕ್ಕೂ ಊಹಿಸಲು ಸಾಧ್ಯವಾದಷ್ಟು ಕೆಟ್ಟದ್ದು, ಇಂತಹ ಪ್ರಕರಣಗಳು ನಡೆಯದಂತೆ ಮುನ್ನೆಚ್ಚರಿಕೆಯಾಗಿ ಅಧಿಕಾರಿಗಳು ಮಕ್ಕಳ ರಕ್ಷಣೆಗೆ ಮುಂದಾಗಬೇಕು ಎಂದು ಜಿಲ್ಲಾಧಿಕಾರಿ ರೋಷನ್ ಸೂಚನೆ ನೀಡಿದರು.

**ಕಾರ್ಯಾಗಾರದ ಮಾಹಿತಿ:**

ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಮಹಿಳಾ ಕಲ್ಯಾಣ ಸಂಸ್ಥೆಯ ಯೋಜನಾ ಸಂಯೋಜಕರಾದ ಸುರೇಖಾ ಪಾಟೀಲ ಮಕ್ಕಳ ವಲಸೆ, ಗುಳೆ, ಮಕ್ಕಳ ಸಾಗಾಣಿಕೆ, ಮಕ್ಕಳ ಬಿಕ್ಷಾಟನೆ ನಿರ್ಮೂಲನೆ, ಪೋಕ್ಸೋ ಕಾಯ್ದೆ, ಬಾಲ್ಯವಿವಾಹ ನಿಷೇಧ ಕಾಯ್ದೆಗಳ ಕುರಿತು ಕಾರ್ಯಾಗಾರದಲ್ಲಿ ಮಾಹಿತಿ ನೀಡಿದರು.

ಇನ್ನೋರ್ವ ಸಂಪನ್ಮೂಲ ವ್ಯಕ್ತಿ ಹಾವೇರಿ ಜಿಲ್ಲಾ ಪೊಲೀಸ್ ತರಬೇತುದಾರ ಮಲ್ಲೇಶ ಜಾಲಗಾರ ಮಾತನಾಡಿ "ಬಾಲ ನ್ಯಾಯ ಕಾಯ್ದೆ-2015", ಪೋಕ್ಸೋ, ಬಾಲ್ಯ ವಿವಾಹ ನಿಷೇಧ ಕಾಯ್ದೆ, "ಮಕ್ಕಳ ಬಿಕ್ಷಾಟನೆ ನಿರ್ಮೂಲನೆ" ಕುರಿತು ಮಾಹಿತಿ ನೀಡಿದರು.

ಅದೇ ರೀತಿಯಲ್ಲಿ "ಮಿಷನ್ ವಾತ್ಸಲ್ಯ" ಮೂಲಕ ತುರ್ತು ಪರಿಸ್ಥಿತಿಯಲ್ಲಿ 24ಘ7 ಉಚಿತ ಮಕ್ಕಳ ಸಹಾಯವಾಣಿ ಕಾರ್ಯಾಚರಣೆಯಲ್ಲಿದೆ. ಭಿಕ್ಷಾಟನೆ ಮಾಡುತ್ತಿರುವ ಮಕ್ಕಳು, ಬಾಲ ಕಾರ್ಮಿಕ ಮಕ್ಕಳು, ಕಾಣೆಯಾದ ಮಕ್ಕಳು, ಒಂಟಿ ಮಕ್ಕಳು, ಮಾದಕ ವ್ಯಸನಿ, ಬಾಲ್ಯ ವಿವಾಹ, ಲೈಂಗಿಕ ದೌರ್ಜನ್ಯ, ಹಿಂಸೆ ಮತ್ತು ಅತ್ಯಾಚಾರ, ಶಿಕ್ಷಣ ವಂಚಿತ ಮಕ್ಕಳು ಕಂಡು ಬಂದಲ್ಲಿ ತಕ್ಷಣವೇ 1098 ಅಥವಾ 112 ಗೆ ಕರೆ ಮಾಡಬಹುದು.

ಅಸುರಕ್ಷಿತ ಸ್ಪರ್ಶ (UNSAFETOUCH), ಸುರಕ್ಷಿತ ಸ್ಪರ್ಶ (SAFETOUCH)ಕುರಿತು ಕಾರ್ಯಾಗಾರದಲ್ಲಿ ಅಧಿಕಾರಿಗಳಿಗೆ ಮಾಹಿತಿ ನೀಡಲಾಯಿತು.

ಮಕ್ಕಳ ವಿಶೇಷ ಪೊಲೀಸ್ ಘಟಕದ ನೋಡಲ್ ಅಧಿಕಾರಿ ಹಾಗೂ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಆರ್ಬಿ ಬಸರಗಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ಆರ್. ನಾಗರಾಜ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಚಂದ್ರಶೇಖರಸುಖಸಾರೆ,ಮಕ್ಕಳಕಲ್ಯಾಣಸಮಿತಿ ಅಧ್ಯಕ್ಷ ಜಗದೀಶ್ ಸರಿಕರ ಉಪಸ್ಥಿತರಿದ್ದರು. ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಜಿಲ್ಲಾ ಮಟ್ಟದ ಅಧಿಕಾರಿಗಳು,ಪೊಲೀಸ್ಇಲಾಖೆಅಧಿಕಾರಿಗಳು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.

---

### ಮಳೆ ಸೂಚನೆ ನೀಡುವ ವೈಶಿಷ್ಟ್ಯ ಪರಂಪರೆಯ ಮಠ | ಈ ಭಾಗದ ರೈತರ ಕೃಷಿ ವಿಶ್ವವಿದ್ಯಾಲಯವೆನಿಸಿದ ಶ್ರೀಮಳಿಯಪ್ಪಯ್ಯನಮಠ

# ಮಠದಲ್ಲಿ ಪ್ರತಿನಿತ್ಯ ಜಲಕ್ಕೆ ಪೂಜೆ, ಮಳೆ ಆರಾಧನೆಯ ಮಠ, ಪ್ರತಿವರ್ಷ ಮಳೆ ಬೆಳೆ ಸೂಚನೆ

**ಮಾರ್ಚ 8 ರಂದು ಶ್ರೀ ಜಗದ್ಗುರು ಮಳೇರಾಜೇಂದ್ರ ಸ್ವಾಮಿ ರಥೋತ್ಸವ ವಿಜೃಂಭಣೆಯಿಂದ ಜರುಗುವುದು.**







ಭಾರತ ಗ್ರಾಮೀಣ ಸೋಗಡಿನಿಂದ ಕೂಡಿದ ಸಾಂಸ್ಕೃತಿಕ ಜನಪದ ಹಿನ್ನೆಲೆಯ ವೈಚಾರಿಕತೆ ಹಾಗೂ ವೈಜ್ಞಾನಿಕ ತಳಹದಿಯಮೇಲೆ ನಿಂತ ಭವ್ಯ ಪರಂಪರೆಯುಳ್ಳ ಪುಣ್ಯಕ್ಷೇತ್ರವಿದು. ಇಲ್ಲಿ ಅನೇಕ ಕ್ರಾಂತಿ ಶಾಂತಿ ಪುರುಷರು, ಶರಣರು ದಾಸಮಹನೀಯರು ಜನ್ಮತಳೆದಿದ್ದಾರೆ. ಸಮೃದ್ಧ ಇತಿಹಾಸ ಹೊಂದಿರುವ ವೈಶಿಷ್ಟ್ಯಪೂರ್ಣ ದೇಶ ನಮ್ಮದು, ಇಲ್ಲಿ ಹಬ್ಬ ಹರಿದಿನಗಳಿಗೇನು ಕಮ್ಮಿಯಿಲ್ಲಾ, ಪ್ರತಿದಿನ ವಿಶೇಷ ಸಾಂಸ್ಕೃತಿಕ ಹಬ್ಬ ಮೋಜಲುಗಳು ವೈಶಿಷ್ಠ ಆಚರಣೆಗಳೆ ತುಂಬಿರುವ ಭವ್ಯ ಸನಾತನ ಧಾರ್ಮಿಕ ಪರಂಪರೆ ಭಾರತದ್ದು, ದೇಶದ ಅನೇಕ ಪುಣ್ಯಕ್ಷೇತ್ರಗಳಲ್ಲಿ ಒಂದಾದ ಬಾಗಲಕೋಟೆತಾಲೂಕಿನಮುರನಾಳಗ್ರಾಮದ ಜಗದ್ಗುರು ಶ್ರೀಮಳೆರಾಜೇಂದ್ರಸ್ವಾಮಿಗಳ ಮಠವು ಒಂದು, ಇದು ಹಿಂದೂ-ಮುಸ್ಲಿಂ ಭಾವೈಕ್ಯತೆ ಸಂಕೇತವಾಗಿದೆ, ಸಂಗೀತದ ತವರುಮನೆಯಾಗಿ, ಮಳೆ ಆರಾಧನೆ ಮತ್ತು ಜಲವನ್ನೆ ಪೂಜಿಸುವ ಭವ್ಯ ಪೌರಾಣಿಕ ಇತಿಹಾಸ ಹೊಂದಿರುವ ಶೃದ್ಧಾ ಕೇಂದ್ರ ಎಂದೇ ಖ್ಯಾತಿ ಪಡೆದ ಪುಣ್ಯಕ್ಷೇತ್ರವಾಗಿದೆ.

ಸುಮಾರು 500 ವರ್ಷಗಳ ಇತಿಹಾಸವನ್ನು ಹೊಂದಿ ಸುಂದರ ಪ್ರಕೃತಿ ಸೌಂದರ್ಯದಿಂದ ಕೂಡಿದ ಕ್ಷೇತ್ರ ಬಾಗಲಕೋಟೆಯಿಂದ 5 ಕಿ.ಮೀ. ದೂರದಲ್ಲಿರುವ ಹಳೆ ಮುರನಾಳ ನಾಡಿನ ಜೀವಗಂಗೆ ಎನಿಸಿದ ಘಟಪ್ರಭೆಯ ದಡದ ಮೇಲಿದ್ದು ನಿಸರ್ಗ ಸೌಂದರ್ಯಕ್ಕೆ ಸಾಕ್ಷಿ ಎನ್ನುವಂತೆ ಶ್ರೀ ಮಳೆರಾಜೇಂದ್ರ ಸ್ವಾಮಿಗಳ-ಮಠವು ವಿಶಿಷ್ಟ ವಾಸ್ತು ಶಿಲ್ಪ ಕೆತ್ತನೆಯಿಂದ ಕೂಡಿದೆ. ಮುರನಾಳ ಗ್ರಾಮವು ಸರ್ವ ಧರ್ಮ ಸಮನ್ವಯದ ಸಂಗಮ! ಮುಳಗಡೆಯ ಹಿನ್ನಿರಿನಲ್ಲಿ ಮುರನಾಳ ಗ್ರಾಮ ಬಾಧಿತವಾಗಿದ್ದರಿಂದ ಗ್ರಾಮವನ್ನು ಸಿಮಿಕೇರಿ ಹತ್ತಿರ ಹೊಸ ಗ್ರಾಮವಾಗಿ ಸ್ಥಳಾಂತರಗೊಂಡಿದೆ.

ಮುರನಾಳ ಗ್ರಾಮ ಹಳೆ ಸಂಪ್ರದಾಯ ಪದ್ಧತಿಗಳು ನಶಿಸಿ ಹೋಗದಂತೆ ಇಂದಿಗೂ ಜಿವಂತವಾಗಿಸಿಕೊಂಡು ಆಚರಿಸುತ್ತ ಬಂದಿದೆ ಶ್ರೀ. ಮಳೇರಾಜೇಂದ್ರ ಸ್ವಾಮಿಯ ಜಾತ್ರಾ ಮಹೋತ್ಸವ ಐತಿಹಾಸಿಕ ಪರಂಪರೆ ಹಿನ್ನೆಲೆಯಿಂದ ಕೂಡಿದ್ದು ಅನೇಕ ವಿಶಿಷ್ಟತೆಯಿಂದ ಕೂಡಿ ಜಾತ್ರೆಯಲ್ಲಿ ಅನೇಕ ಕಾರ್ಯಕ್ರಮಗಳು ಜರುಗುತ್ತವೆ. ಈ ಜಾತ್ರೆಯು ಶ್ರೀ ಮನೃಪ ಶಾಲಿವಾಹನ ಶಕೆ 1946 ಕ್ರೋಧನಾಮ ಸಂವತ್ಸರ, ಮಾಘ ಶುದ್ಧ ಪಾಲ್ಗುಣ ಪ್ರತಿಪದದಿಂದ ಪ್ರೆಬ್ರವರಿ 28 ರಿಂದ ಪ್ರಾರಂಭವಾಗಿದ್ದು, ಫಾಲ್ಗುಣ ಶುದ್ದ ದ್ವಾದಶೀ ಮಾರ್ಚ11 ರವರೆಗೆ ಜಾತ್ರಾ ಮಹೋತ್ಸವ ಜರುಗುತ್ತದೆ.

9ದಿನಗಳ ನಿರಂತರ ರಾತ್ರಿ 7 ಗಂಟೆಗೆ ಮಾತಾ ಭಗಿನಿಯರ ಆರತಿಯೊಂದಿಗೆ ಭಾಜಾ ಭಜಂತ್ರಿ ಡೊಳ್ಳು ಮೇಳ ಮತ್ತು ಮಳೇಯಪ್ಪಯ್ಯ ಸ್ವಾಮಿಯ ಪ್ರತಿಷ್ಠಾಪನೆಯ ಪಲ್ಲಕ್ಕಿ ಜೊತೆಗೆ ಸಣ್ಣರಥ (ಉಚ್ಚಯ್ಯ) ಉತ್ಸವ ಜರುಗತ್ತದೆ. 9ದಿನಗಳ ಈ ಉತ್ಸವದಲ್ಲಿ ಉಪವಾಸ ವ್ರತಕೈಗೊಂಡು{ಮುತ್ತೈದೆಭಾಗ್ಯಕ್ಕಾಗಿ ವೃತ್} ಪ್ರತಿದಿನಿ ಸಾವಿರಾರು ಮಹಿಳೆಯರು ಆರತಿ ಸೇವೆಯಲ್ಲಿಪಾಲ್ಗೋಳ್ಳುತ್ತಾರೆ,ಪಾಲ್ಗುಣಶುದ್ದ ಅಷ್ಟಮಿಯಂದು ಕಳಸಾರೋಹಣ ಹಾಗೂ ವಿಶೇಷ ಮಹಾಪ್ರಸಾದ ಸಕಲ ಭಕ್ತರೊಂದಿಗೆ ನಡೆಯುತ್ತದೆ. ನವಮಿಯಂದು ಸಾಯಂಕಾಲ ಶ್ರೀ ಮಳೇರಾಜೇಂದ್ರ ಸ್ವಾಮಿ ಭವ್ಯ ರಥೋತ್ಸವ ಜರುಗುತ್ತದೆ. ಅಲ್ಲದೆ ಶುದ್ದ ದಶಮಿಯಂದು "ಕಡುಬಿನ ಕಾಳಗ" (ಮುಂದಿನ ವರ್ಷದ ಮಳೆ ಬೆಳೆ ಸೂಚನೆ) ಕಾರ್ಯಕ್ರಮ ಅದ್ದೂರಿಯಾಗಿ ಜರಗುತ್ತದೆ, ಮಳೆ ಕುರಿತಂತೆ ಗಾಮೀಣ ಬಾಗದಲ್ಲಿ ವಿಶಿಷ್ಟ ಆಚರಣೆಗಳಿವೆ ಯಾವ ಮಳೆ ಬರುತ್ತೆ ಯಾವ ಬೇಳೆ ಬೇಳೆದರೆ ಒಳ್ಳೆದು ಎಂಬುದನ್ನ ಕಡುಬಿನ ಕಾಳಗ ಆಚರಣೆಯ ಮೂಲಕ ಮುಂಗಾರಿನ ಮುನ್ಸುಚನೆಯನ್ನು ನಿಡಲಾಗುತ್ತದೆ, ಮತ್ತು ಪ್ರತಿದಿನ ಭಗವತ್ಗೀತೆ ಪಾರಯಾಣ ನಡೆಯುವುದು, ಜಾತ್ರೆಯಲ್ಲಿ ನಾಡಿನ ಪ್ರಖ್ಯಾತ ಸಂಗೀತ ವಿದ್ವಾಂಸರಿಂದ ಸಂಗೀತ ದಾಸೋಹ ನಡೆಯುವುದಲ್ಲದೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗತ್ತವೆ.

**ಜಾತ್ರಾ ಹಿನ್ನೆಲೆ :** ಶ್ರೀ ಮಠದ ಮಹಾಪುರುಷ ರೆನಿಸಿಕೊಂಡ ಶ್ರೀ ಮಳೆರಾಜೇಂದ್ರ ಸ್ವಾಮಿಗಳ ನೆಲೆನಿಂತ ಪುಣ್ಯ ತಾಣ ಶ್ರೀಗಳು ತಿಂಥಣಿ ಮೌನೇಶ್ವರ ಶಿಶ್ಯರಾದ ಗಗನಾಪುರದ ಗಂಗಪ್ಪಯ್ಯನವರ ಶಿಷ್ಯ ಪರಂಪರೆಗೆ ಸೇರಿದವರಾಗಿದ್ದಾರೆಂದು ಇವರು 14-15ನೇ ಶತಮಾನದಲ್ಲಿ ಲೀಲೆ ತೋರಿದ ಪವಾಡ ಪುರುಷರು ಎಂದು ಹೇಳಲಾಗಿದೆ. ಶ್ರೀ ಮಳಿಯಪ್ಪಯ್ಯ ಸ್ವಾಮಿಗಳ ಬಾಗೇವಾಡಿ ತಾಲೂಕಿನ ಉಕ್ಕಲಿ ಗ್ರಾಮದ ದೈವಿ ಭಕ್ತರಾದ ಗುರುನಾಥಪ್ಪ ತಾಯಿ ತುಳಜಾಬಾಯಿ ದಂಪತಿಗಳ ಸುಪುತ್ರನಾಗಿ ಜನಿಸಿದವರು. ಗುರುಗಳಾದಗಗನಾಪುರದಗಂಗಪ್ಪಯ್ಯನವರ ಮಾರ್ಗದರ್ಶನದಂತೆ ಬೆಳೆದ ಶ್ರೀಗಳು ಅವರ ಅಪ್ಪಣೆಯಂತೆ ದೇಶ ಸಂಚಾರ ಮಾಡುತ್ತ ಸುಕ್ಷೇತ್ರ ಮುರನಾಳ ಗದ್ದನಕೇರಿಗೆ ಬಂದು ಇಲ್ಲಿ ತಪೋವನವನ್ನು ನಿರ್ಮಿಸಿ ತಮ್ಮ ಅನೇಕ ಪವಾಡಗಳಿಂದ ಬರಗಾಲದ ಭವಣೆಯಲ್ಲಿ ಮಳೆ ತರಿಸಿ ನೆಲ ತನಿಸಿ ಭಕ್ತರ ಬಾಳಿಗೆ ಬೆಳಕಾಗಿ ನಿಂತರು. ಶ್ರೀಗಳು ಮಹಿಮಾಪುರುಷರಾಗಿದ್ದು ಲೌಕಿಕದೊಳಗಿದ್ದು ಅಲೌಕಿಕ ವ್ಯಕ್ತತ್ವವುಳ್ಳವರಾಗಿದ್ದು ಮುರನಾಳ ಗ್ರಾಮದ ಭಕ್ತರ ಮನಸೂರೆಗೊಂಡು ಇಲ್ಲಿಯೆ ನೆಲೆ ನಿಂತಿರುವುದು ನಿಖರವಾಗಿ ತಿಳಿದು ಬರುತ್ತದೆ. ಶ್ರೀಗಳು ಮಹಾಪುರುಷರೆಂದು ನಂಬಿ ಇಲ್ಲಿಯೆ ಇರಿಸಿಕೊಂಡ ಕೀರ್ತಿ ಮತ್ತು ಪುಣ್ಯ ಮುರನಾಳ ಗ್ರಾಮದ ಗೌಡಕಿ ಮನೆತನದ ಚಾಯಪ್ಪ ಗೌಡರಿಗೆ ಸಲ್ಲುತ್ತದೆ. ಶ್ರೀಗಳು ಇಲ್ಲಿಯೆ ತಮ್ಮ ಮೂಲ ಸ್ಥಾನವನ್ನಾಗಿಸಿ ಹಳ್ಳಿ ಹಳ್ಳಿಗೆ ತೆರಳಿ ಅಲ್ಲಿದ್ದ ಭಕ್ತರ ಕಷ್ಟಗಳನ್ನು ತಮ್ಮ ಅಗಾದ ತಪೋಶಕ್ತಿಯಿಂದ ದೂರಮಾಡಿ ಅನೇಕ ಲೀಲಾಪವಾಡಗಳ ಮೂಲಕ ಭಕ್ತರಿಗೆ ಜ್ಞಾನದ ಮಾರ್ಗದರ್ಶನ ಮಾಡುತ್ತ ಅಲ್ಲಿ ಭಕ್ತಾಧಿಗಳು ನೀಡುವ ಬಿಕ್ಷೆಯಿಂದ ತಮ್ಮ ಹತ್ತಿರ ಮಠಕ್ಕೆ ಬರುವ ಭಕ್ತಾಧಿಗಳಿಗೆ ಅನ್ನದಾಸೋಹ ಮಾಡಹತ್ತಿದರು. ಕಾಲಾಂತರ ಶ್ರೀಗಳು ಮಾತೆ ತಿಪ್ಪಮ್ಮನವರೊಂದಿಗೆ ವಿವಾಹವಾಗಿ ವರ್ಣಾಶ್ರಮವನ್ನು ಸ್ವಿಕರಿಸಿ. ದಂಪತಿಗಳಿಬ್ಬರು ತಮ್ಮ ಪವಾಡಗಳ ಮೂಲಕ ಭಕ್ತರ ಸೇವೆಯಲ್ಲಿ ತೊಡಗಿ ಸಿಕೊಂಡರು. ಮಾತೆ ತಿಪ್ಪಮ್ಮನವರು ದ್ಯವ ಸಂಪನ್ನರಾಗಿದ್ದರು. ಅನೇಕ ಲಿಲೆಗಳ ಮುಖಾಂತರ ಹೆಸರು ವಾಸಿಯಾಗಿದ್ದರು. ಅವರು ತಮ್ಮ ಆಸೆಯಂತೆ "ಗವಿ ಪ್ರವೇಶ" ಮಾಡಿ ಜೀವಂತ ಸಮಾದಿ ಯಾದರು. ಮಳೆಯಪ್ಪಯ್ಯ ಸ್ವಾಮಿಗಳು ತಮ್ಮ ಪತ್ನಿಯ ಸ್ಮರಣಾರ್ಥ ತಿಪ್ಪಮ್ಮನವರ ಮೂರ್ತಿ ಇರುವ ಭವ್ಯ ರಥವನ್ನು ನಿರ್ಮಿಸಿ ಮಾತೆಯ ಆರಾದನೆಯನ್ನು ಜಾತ್ರಾ ಮಹೋತ್ಸವನ್ನು ಆಚರಿಸಲು ತಮ್ಮ ಸುಪುತ್ರನಾದ ಸ್ವಾಮಿಗಳಿಗೆ ಮತ್ತು ಭಕ್ತ ಜನರಿಗೆ ಆಜ್ಞೆ ಮಾಡಿ ಗದ್ದನಗಿರಿ ಬೆಟ್ಟದಲ್ಲಿ ಗವಿ ಪ್ರವೇಶ ಮಾಡಿದರು. ಅವತ್ತಿನಿಂದ ಪರಾರಂಭವಾದ ಜಾತ್ರೆ, ಅನೇಕ ವೈಶಿಷ್ಟತೆಗಳ ಮೂಲಕ ನಾಡಿನಲ್ಲಿ ಹೆಸರಾಗಿದೆ.

**ಮಠದ ಪರಂಪರೆ :** ಮಳಿಯಪ್ಪನ ಮಠ ಕೃಷಿಕರ ವಿಶ್ವವಿದ್ಯಾಲಯ 1675 ರ ಸುಮಾರಿಗೆ ತಲೆಯೆತ್ತಿರುವ ಮಳಿಯಪ್ಪಜ್ಜನ ಮಠ ಇಂದಿಗೂ ಈ ಭಾಗದ ರೈತರ ಕೃಷಿ ವಿಶ್ವವಿದ್ಯಾಲಯ ಯಾವ ಮಳೆ ಎಷ್ಟು ಸುರಿಯುತ್ತೆ ಯಾವ ಗಾಳಿ ಎಷ್ಟು ಬೀಸುತ್ತೆ. ಈ ಹಂಗಾಮಿನಲ್ಲಿ ಏನು ಬಿತ್ತಿದರೆ ಬೆಳೆ ಬರುತ್ತದೆ ಎನ್ನುವುದಕ್ಕೆಲ್ಲಾ ಅವರು ಈ ಮಳಿಯಪ್ಪಜ್ಜನ ಮಠದಿಂದ ಹೊರಡುವ ಸಂಜ್ಞೆ- ಆಜ್ಞೆಗಳನ್ನು ಅವಲಂಬಿಸಿದ್ದಾರೆ. ಅಷ್ಟು ನಿಖರವಾಗಿ ಇಲ್ಲಿನ ಪೀಠಾಧೀಶರು ಮಳೆ ಮತ್ತು ಹವಾಮಾನದ ವಿವರ ನೀಡುತ್ತಾ ಬಂದಿದ್ದಾರೆ. ಇದನ್ನು ಇಲ್ಲಿನ ಜನ ವಾಕ್ಸಿದ್ದಿ ಎಂದು ನಂಬುತ್ತಾರೆ. ಎಲ್ಲ ಧರ್ಮಿಯ ಕೃಷಿಕರು, ಈ ಮಠದ ಆರಾಧಕರು, ಪ್ರತಿ ಬೆಳೆ ಬಂದಾಗ ಮೇವು ಧಾನ್ಯಗಳನ್ನು, ಈ ಮಠಕ್ಕೆ ತಂದು ಒಪ್ಪಿಸುತ್ತಾ ಮಠ ತಮ್ಮದು ಎಂದು ನಂಬಿದ್ದಾರೆ. ಶ್ರೀಗಳು ತಮ್ಮತಘೋಶಕ್ತಿಯಿಂದಜನರಸಂಕಷ್ಟಗಳನ್ನು ದೂರಗೊಳಿಸಿ ಎಲ್ಲರನ್ನೂ ಸನ್ಮಾರ್ಗದತ್ತ ಕೊಂಡ್ಯುಯ್ಯಿದು ಭವ್ಯ ಪರಂಪರೆಯನ್ನು ಹುಟ್ಟು ಹಾಕಿದ್ದಾರೆ ಜೊತೆಗೆ ವಿಶಿಷ್ಟ ಸಾಧನಾಕ್ಷೇತ್ರವನ್ನಾಗಿ ಮಠದಲ್ಲಿ 'ವೇದಾಂತ' ಜೊತೆಗೆ ನಾದಾಂತ'ವನ್ನು ಭಕ್ತರಿಗೆ ಶ್ರೀಗಳು ಉಣಬಡಿಸಿದ್ದಾರೆ.ಅಲ್ಲದೆ ಉತ್ತರ ಕರ್ನಾಟಕ ಸಿತಾರಾವಾದನ ಕಲೆಯನ್ನು ಬೆಳಕಿಗೆ ತಂದ ಕಿರ್ತಿ ಈ ಮಠಕ್ಕೆ ಸಲ್ಲುತ್ತದೆ. ಇಲ್ಲಿ ಸಿತಾರವಾದನ, ವಾಯಿಲಿನ ವಾದನ, ತಬಲಾ, ಹಾರ್ಮೋನಿಯಂ, ಕೊಳಲು, ವಾದ್ಯಗಳ ಶ್ರೀಗಳು ನುಡಿಸುವುದರ ಜೊತೆಗೆ ಅನೇಕ ಕಲಾವಿದರು ಇಲ್ಲಿ ಸಂಗೀತ ಕಲೆತು ನಾಡಿಗೆ ಹೆಸರಾಗಿದ್ದಾರೆ.

ಇನ್ನೊಂದು ಘಿಶೇಷತೆಯೆಂದರೆ ಶ್ರೀಗಳ ಜಾತ್ರಾ ಮಹೋತ್ಸವ ಹಾಗೂ ಇನ್ನಿತರ ಉತ್ಸವ ಕಾರ್ಯಕ್ರಮಗಳಲ್ಲಿ ಶ್ರೀ ಮಠಕ್ಕೆ ಮುಸ್ಲಿಂ ಮಹಿಳೆಯರು ಆರತಿಯೊಂದಿಗೆ ಭಾಗವಹಿಸಿ ಸೇವೆ ಸಲ್ಲಿಸುವುದು ಸರ್ವಧರ್ಮ ಸಮನ್ವಯವನ್ನು ತಿಳಿಸುತ್ತದೆ. ಅಲ್ಲದೆ ಆರತಿ ಸೇವೆಯಲ್ಲಿ ಬಾಗವಹಿಸುವ ಸಾವಿರಾರು ಮಹಿಳೆಯರು ಕೂಡಾ 9 ದಿನಗಳ ನಿರಂತರ ಉಪವಾಸ ವೃತ್ ಮುತ್ತೈದೆಭಾಗ್ಯಕ್ಕಾಗಿ ಆಚರಿಸುತ್ತಾರೆ, ಇದು ಹೇಚ್ಚಾಗಿ ಹೆಂಗಳೆಯರ ಜಾತ್ರೆಕೂಡಾ ಹೌದು.

"ವಿಶೇಷ ಎಂದರೆ ಶ್ರೀಗಳು ಲೌಕಿಕವಾಗಿಯೂ ಅದ್ವೈತ ಕೌಟುಂಬಿಕ ಜೀವನ ಇವರದು, ಸ್ವಾಮಿಗಳ ದೇಹತ್ಯಾಗ ಮಾಡಿದರೂ ಅವರ ಧರ್ಮ ಪತ್ನಿಯರು ಸುಮಂಗಲೆಯ ಸಂಕೇತಗಳಾದ ಮಾಂಗಲ್ಯ, ಕುಂಕುಮ, ಮೂಗುತಿ, ಕಂಕಣ, ಹಾರ ಒಳಗೊಂಡಂತೆ ಮುತ್ತೈದೆ ಯಾಗಿ ಉಳಿಸಿಕೊಂಡು ಬಂದದ್ದು ಪರಂಪರೆ. ಶ್ರೀ ದಂಪತಿಗಳು ದೇಹಗಳ ಸಂಬಂಧ ಮಾತ್ರವಾಗಿರದೆ ಆತ್ಮಗಳ ಮಿಲನ ಹೀಗೆ ಅನೇಕ ಉನ್ನತ ಮೌಲ್ಯ ವಿಶಿಷ್ಟ ಪರಂಪರೆಗಳಿಂದ ಭಕ್ತರನ್ನು ಸೂಜಿಗಲ್ಲಿನಂತೆ ಆಕರ್ಷಿಸುವ ಈ ಮಠದ ಸಾಂಸ್ಕೃತಿಕ ಶ್ರೀಮಂತಿಕೆ ಅನೇಕರಿಗೆ ಅಜ್ಞಾತ.

**ಶ್ರೀ ಮಠದ ವಚನವಾಕ್ಯ :**

ಓಏಕಲಾಕಐಂಶಿಹಜಾರಪಾಚೋಪೈಗಂಬರ ಜೀತಾಪೀರ್ ಜಗದ್ದುರು ಮೌನಾಧೀನ ಕಾಶಿಪತಿ ಗಂಗಾಧರ ಹರಹರ ಮಹಾದೇವ॥ ಹರಿವ ಹಾವಿನ ಗಂಡ ಉರಿವ ಕಿಚ್ಚಿನ ಗಂಡ ಹಿಂದು ರಾಜರ ಗಂಡ ಶ್ರೀ ಮಳೆರಾಜ"

"ಮಾಗಿ ಕಟ್ಟಿದರೇನು ನೇಗಿಲ ಹೂಡಿದರೇನು ಮೇಘರಾಜನ ತಡೆದರೆ ಜಗವೆಲ್ಲಾ ಉಳಿಯುವುದೆ"

ಸಕಾಲದಲ್ಲಿ ಮಳೆ ಸುರಿದು। ಇಳೆಯಲ್ಲ ಸಮೃದ್ಧಿ ಬೆಳೆ ಬೆಳೆದು। ದೇಶವೆಲ್ಲಾ ಸುಭೀಕ್ಷವಾಗಿ।ಸರ್ವರು ಸುಖದಿಂದ ಬಾಳಲಿ॥ "ಸರ್ವೆ ಜನಾಃ ಸುಖಿನೋ ಭವಂತು" :

**-ಸಂಗಮೇಶ ಪತ್ತಾರ (ಬಡಿಗೇರ)**
**ಮುರನಾಳ**
**7026317555**

# 2024 ನೇ ಸಾಲಿನ ಜಾನಪದ ಅಕಾಡೆಮಿ ವಾರ್ಷಿಕ ಪ್ರಶಸ್ತಿ ಪ್ರಕಟ: ಗಂಗಪ್ಪ ಕರಡಿ ಅವರ ಆಯ್ಕೆ

**ವರದಿ: ಚಂದ್ರಶೇಖರ ಮೋರೆ.**

**ಮಹಾಲಿಂಗಪುರ :** ಪಟ್ಟಣದ ಹಿರಿಯ ಕರಡಿ ಮಜಲು ವಾದನ ಕಲೆಯ ತಾಳವಾದಕ ಕಲಾವಿದ ಗಂಗಪ್ಪ ಮಹಾಲಿಂಗಪ್ಪ ಕರಡಿ ಅವರು ಕರ್ನಾಟಕ ಸರ್ಕಾರದ ಜಾನಪದ ಅಕಾಡೆಮಿಯ 2024 ನೇ ವಾರ್ಷಿಕ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಪರಿಚಯ :

ಪಟ್ಟಣದ ಬಡ ನೇಕಾರ ಕುಟುಂಬದ ಮಹಾಲಿಂಗಪ್ಪ ರುದ್ರಪ್ಪ ಕರಡಿ ಹಾಗೂ ಕಾಳವ್ವ ಮಹಾಲಿಂಗಪ್ಪ ಕರಡಿ ದಂಪತಿಗಳ ಪುತ್ರನಾಗಿ 1955 ರ ಜೂನ್ ಒಂದರಂದು ಜನಿಸಿದರು. ಕೇವಲ ಐದನೇ ತರಗತಿವರೆಗೆ ಶಿಕ್ಷಣ ಪಡೆದ ಇವರು ತಮ್ಮ ಹದಿನೈದನೇ ವಯಸ್ಸಿನಲ್ಲಿಯೆ ಕಲಾಜೀವನಕ್ಕೆಕಾಲಿರಿಸಿದರು.ಕರಡಿಮನೆತನದ ಹಿರಿಯ ಕಲಾವಿದರಾದ ವೀರಭದ್ರಪ್ಪ (ದೊಡ್ಡಪ್ಪ ) ಹಾಗೂ ಗುರಲಿಂಗಪ್ಪ ವ್ಹಿ. ಕರಡಿ, ಚನ್ನಪ್ಪ ವ್ಹಿ. ಕರಡಿ, ಮುರಗಯ್ಯಾ ಮಠಪತಿ ಅವರಿಂದ ಕಲಾದೀಕ್ಷೆ ಪಡೆದುಕೊಂಡು ಕರಡಿ ಮಜಲು (ತಾಳ \ ವಾದ್ಯ) ಕಲೆಯ ತರಬೇತಿಯನ್ನುಪಡೆದುಕೊಂಡರು. ಇಳಕಲ್ಲಿನ



ಮಹಾದಾಸೋಹಿ ಮಹಾಂತಪ್ಪನವರಿಂದ ಗುರುದೀಕ್ಷೆಯನ್ನು ಪಡೆದಿದ್ದಾರೆ.

ಕರಡಿ ಮನೆತನದ ಹಿರಿಮೆ :

ವಂಶ ಪಾರಂಪರಿಕವಾಗಿ ಕಳೆದ ಐದುನೂರು ವರ್ಷಗಳಿಂದ ಶಿವಯೋಗಿ ಮಹಾಲಿಂಗೇಶ್ವರ ಮಠಕ್ಕೆ ಕರಡಿ ಮನೆತನದ 22 ನೇ



ತಲೆಮಾರುಗಳಿಂದ ಪ್ರತಿದಿನ ನಿರಂತರ ಸೇವೆ ಸಲ್ಲಿಸುತ್ತಿರುವ ಕಲಾವಿದರು ಇವರಾಗಿದ್ದಾರೆ. 1882 ರಲ್ಲಿ ಮುಧೋಳ ಸಂಸ್ಥಾನದ ಕಲಾವಿದರಾಗಿ ಸೊಲ್ಲಾಪುರ ಮಹಾರಾಜರ ಮುಂದೆ ಕಾರ್ಯಕ್ರಮ ನೀಡಿ ಬಂಗಾರದ ಪದಕ ಪಡೆದವರು. ಕಲೆಯ ಮೂಲಕ ತಮ್ಮ ಇಡೀ ಕುಟುಂಬವನ್ನೇ ತಂಡವಾಗಿಸಿ ರಾಜ್ಯ ಏಕೀಕರಣಕ್ಕಿಂತ ಮುಂಚೆ ಮೈಸೂರು ರಾಜ್ಯ ಸಂಗೀತ ನಾಟಕ ಅಕಾಡೆಮಿಯ ಮೂಲಕ ಯಾವುದೇ ಸಂಪರ್ಕ ಸಾಧನವಿಲ್ಲದ ಕಾಲದಲ್ಲಿ ದೇಶದರಾಜಧಾನಿದೆಹಲಿಯಲ್ಲಿಪ್ರಧಾನಮಂತ್ರಿ, ಘನತೆವೆತ್ತ ರಾಜ್ಯಪಾಲರುಗಳ ಮುಂದೆ ಕರ್ನಾಟಕ ಸಾಂಸ್ಕೃತಿಕ ಪರಂಪರೆಯನ್ನು ಪರಿಚಯಿಸಿದ ಮಹಾಲಿಂಗಪುರದ ಕರಡಿ ಮನೆತನದ ಹೆಗ್ಗಳಿಕೆಯಾಗಿದೆ.

ಸಾವಿರಾರು ಕಲಾ ಪ್ರದರ್ಶನ :

ಗಂಗಪ್ಪ ಕರಡಿಯವರು 1963 ರಲ್ಲಿ ಮೈಸೂರು ರಾಜ್ಯದ ಸಂಗೀತ ನಾಟಕ ಅಕಾಡೆಮಿ ಕಾರ್ಯಕ್ರಮದಲ್ಲಿ ಶಿಕ್ಷಣ ಮಂತ್ರಿ ಎಸ್. ಆರ್. ಕಂಠಿಯವರಿಂದ ಬೆಳ್ಳಿ ಪದಕ, 1972 ರಲ್ಲಿ ಕೂಡಲಸಂಗಮದಲ್ಲಿ ಬಸವಣ್ಣನವರ ಅಷ್ಠ ಶತಮಾನೋತ್ಸವದಲ್ಲಿ ಬಿ. ಡಿ. ಜತ್ತಿ, ಎಸ್. ಆರ್. ಕಂಠಿ ಮತ್ತು ಮೈಸೂರು ಸಂಸ್ಥಾನದ ಮಹಾರಾಜರಾದ ಜಯಚಾಮರಾಜೇಂದ್ರ ಒಡೆಯರರ ಸಮ್ಮುಖದಲ್ಲಿ ಕಾರ್ಯಕ್ರಮ, 1986 ರಲ್ಲಿ ದೆಹಲಿಯಲ್ಲಿ 45 ದಿನಗಳವರೆಗೆ ನಡೆದ "ಅಪ್ನಾ" ಉತ್ಸವದಲ್ಲಿ ರಾಷ್ಟ್ರಪತಿಗಳಾದ ಶಂಕರದಯಾಳ ಶರ್ಮಾ, ಪ್ರಧಾನಮಂತ್ರಿ ರಾಜೀವಗಾಂಧಿ ಅವರ ಸಮ್ಮುಖದಲ್ಲಿ ಕಾರ್ಯಕ್ರಮ, ಆಕಾಶವಾಣಿ ಬಿ ಗ್ರೇಡ್, ಚಂದನ ಟಿವ್ಹಿ, ನ್ಯಾಷನಲ್ ಟಿವ್ಹಿಗಳಲ್ಲಿ ಕಲಾಪ್ರದರ್ಶನ ನೀಡಿದ್ದಾರೆ. ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಪ್ರವಾಸೋದ್ಯಮ ಇಲಾಖೆ, ಜಾನಪದ ಅಕಾಡೆಮಿಯಿಂದ ನಡೆದ ಹಂಪಿ ಉತ್ಸವ, ಮೈಸೂರ ದಸರಾ, ರನ್ನವೈಭವ, ಚಾಲುಕ್ಯ ಉತ್ಸವ, ನವರಸಪುರ ಉತ್ಸವ ಸೇರಿದಂತೆ ಸಾವಿರಾರು ಕಾರ್ಯಕ್ರಮಗಳನ್ನು ನೀಡಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

**ಐವತ್ತೈದು ವರ್ಷಗಳ ಕಲಾಸೇವೆ :** ಮೂಲತ: ನೇಕಾರಿಕೆಯ ಉದ್ಯೋಗದ ಜೊತೆಗೆ ಗಂಗಪ್ಪ ಕರಡಿ ಅವರು ಕಳೆದ ಐವತ್ತೈದು ವರ್ಷಗಳಿಂದ ಕರಡಿ ಮಜಲು ಬಾರಿಸಿಯೇ ಜೀವನ ನಡೆಸುತ್ತಿದ್ದಾರೆ. ಸಧ್ಯ ಎಪ್ಪತ್ತರ ಇಳಿ ವಯಸ್ಸಿನಲ್ಲಿಯೂ ಅತ್ಯಂತ ಹುಮ್ಮಸ್ಸಿನಿಂದ ಕರಡಿ ಮಜಲು ತಾಳವಾದ್ಯ ನುಡಿಸುತ್ತಾರೆ.

**ನಿರಂತರ ಕಲಾಸೇವೆ :** ಪಟ್ಟಣದ ಐತಿಹಾಸಿಕ ಮಹಾಲಿಂಗೇಶ್ವರ ಮಠದಲ್ಲಿ ನಿತ್ಯ ನಿರಂತರ ಕರಡಿಮಜಲು ಕಲಾಸೇವೆಯನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ. ವಂಶಪರಂಪರೆಯಾಗಿ ಬೆಳೆದುಬಂದ ಕರಡಿ ಮಜಲು ಕಲೆಯನ್ನು ಉಳಿಸಿ ಬೆಳೆಸಲು ಅವಿತರವಾಗಿ ಶ್ರಮಿಸುತ್ತಿದ್ದಾರೆ. ಸಧ್ಯ ಗಂಗಪ್ಪ ಕರಡಿ ಅವರ ಮಕ್ಕಳಾದ ಚನಮಲ್ಲಪ್ಪ ಕರಡಿ, ಚಂದ್ರಶೇಖರ ಕರಡಿ, ಮೊಮ್ಮಕ್ಕಳಾದ ಅಭಿನವ, ಪ್ರವೀಣ, ರಾಹುಲ್ ಅವರು ಕೂಡ ಕರಡಿವಾದನ ಕಲೆಯ ಕಲಾವಿದರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

## ಮತ್ತೋರ್ವ ಬೈಕ್ ಕಳ್ಳನ ಬಂಧನ: ಮೂರು ಸೈಕಲ್ ಮೋಟಾರ್ ವಶಕ್ಕೆ

**ಮಹಾಲಿಂಗಪುರ :** ಹಲವೆಡೆ ವಾಹನಗಳನ್ನು ಕಳೆದುಕೊಂಡ ಮಾಲಿಕರು ನೀಡಿದ ದೂರಿನ ಅನ್ವಯ ಮಹಾಲಿಂಗಪುರ ಠಾಣಾಧಿಕಾರಿಗಳು ಮತ್ತು ಪೊಲೀಸ್ ಸಿಬ್ಬಂದಿ ಬಿರುಸಿನ ತನಿಖೆ ನಡೆಸಿ ಕಳುವಾದ ವಾಹನಗಳ ಸಮೇತ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಜಮಖಂಡಿ ಉಪವಿಭಾಗ ಡಿವೈಎಸ್ಪಿ ಈ. ಶಾಂತವೀರ ಹೇಳಿದರು.

ಶುಕ್ರವಾರ ಸ್ಥಳೀಯ ಠಾಣೆಯಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು ಫೆಬ್ರುವರಿ 19 ರಂದು ಚಿಮ್ಮಡ ಗ್ರಾಮದ ಯಲ್ಲಪ್ಪ ಮಹಾಲಿಂಗಪ್ಪ ಗೋವಿಂದಗೋಳ ಇವರ 50 ಸಾವಿರ ರೂ . ಬೆಲೆಬಾಳುವ ಕೆಎ-48 ಇಬಿ-149 ಹೀರೋ ಸ್ಪ್ಲೆಂಡರ್ ದ್ವಿಚಕ್ರ ವಾಹನ ಶುಭಂ ಬಾರ್ ಹತ್ತಿರ ಕಳೆದುಕೊಂಡ ಮತ್ತೊಂದು ಪ್ರಕರಣ ದಾಖಲಾಗಿತ್ತು. ಪೊಲೀಸರು ತನಿಖೆ ನಡೆಸಿ ಮುಧೋಳ, ಯಾದವಾಡ, ಮಹಾಲಿಂಗಪುರ ಪಟ್ಟಣಗಳಲ್ಲಿ ಕಳ್ಳತನ ಮಾಡುತ್ತಿದ್ದ ಕೌಜಲಗಿಯ ಮಲ್ಲಪ್ಪ ಯಲ್ಲಪ್ಪ ಭಜಂತ್ರಿಯನ್ನು ಫೆಬ್ರುವರಿ 20 ರಂದು ದಸ್ತಗಿರಿ ಮಾಡಿ ಆತನಿಂದ 2 ಲಕ್ಷ 40 ಸಾವಿರ ಬೆಲೆಬಾಳುವ ಮೂರು ಮೋಟಾರ್ ಸೈಕಲ್ಗಳನ್ನು ವಶಪಡಿಸಿಕೊಂಡಿದ್ದಾರೆ ಎಂದು ತಿಳಿಸಿದರು.

ಸ್ಥಳಿಯ ಠಾಣೆಯ ಪೊಲೀಸರು ಫೆಬ್ರುವರಿ



15 ರಂದು ಇಬ್ಬರು ಕಳ್ಳರನ್ನು ಬಂಧಿಸಿ ನಾಲ್ಕು ಬೈಕ್ಗಳನ್ನು ವಶಪಡಿಸಿಕೊಂಡಿದ್ದನ್ನು ಇಲ್ಲಿ ಸ್ಮರಿಸಬಹುದು.

ಪ್ರತ್ಯೇಕ ಮತ್ತೊಂದು ಪ್ರಕರಣದಲ್ಲಿ ಜನವರಿ 27 ರಂದುಮಧ್ಯಾಹ್ನತಮ್ಮಸ್ವಂತಮಾಲ್ಕಿಯನಾಲ್ಕು ಲಕ್ಷತೊಂಭತ್ತು ಸಾವಿರ ಕಿಮ್ಮತ್ತಿನ (ಜಾನ್ ದೀರ ಕಂಪನಿ) ಕೆಎ-56, ಟಿ- 2282 ಸಂಖ್ಯೆಯುಳ್ಳ ಟ್ರ್ಯಾಕ್ಟರ್ ಎಂಜಿನ್ ಮತ್ತು ಕೆಎ-49 ಟಿಎ-6744 ಹಾಗೂ ಕೆಎ-49, ಟಿ.ಎ.- 6745 ಕ್ರಮ ಸಂಖ್ಯೆಗಳ ನಾಲ್ಕು ಗಾಲಿಯ ಟ್ರೈಲರ್ಗಳನ್ನು ಸೈದಾಪುರ ಕಬ್ಬು ಬೆಳೆಗಾರರ ಸಮುದಾಯ ಭವನದ ಹತ್ತಿರ ನಿಲ್ಲಿಸಿದ ಸಮಯದಲ್ಲಿ ಅಪರಿಚಿತ ವ್ಯಕ್ತಿಗಳಿಂದ ಕಳುವಾದ ಕುರಿತು ಮೂಡಲಗಿಯ ಬಾಪುಸಾಬ ಮಕ್ತುಮಸಾಬ ಜಾತಗಾರ ಮಹಾಲಿಂಗಪುರ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ಈ ಪ್ರಕರಣದ ತನಿಖೆ ನಡೆಸಿದ ಪೊಲೀಸರು ಜನವರಿ 29 ರಂದು ಕಳುವಾದ ಸದರಿ ಟ್ರ್ಯಾಕ್ಟರ್ ಮತ್ತು ಟ್ರೈಲರ್ಗಳನ್ನು ವಶಕ್ಕೆ ಪಡೆದಿದ್ದಾರೆ. ಆದರೆ ಟ್ರ್ಯಾಕ್ಟರ್ ಕದ್ದ ಆರೋಪಿ ಇನ್ನೂ ಪತ್ತೆಯಾಗಿಲ್ಲ. ಆರೋಪಿಯ ಪತ್ತೆಗಾಗಿ ತನಿಖೆ ಮುಂದುವರೆಸಿದ್ದಾರೆ.

ಸ್ಥಳೀಯ ಠಾಣಾಧಿಕಾರಿ ಕಿರಣ ಸತ್ತಿಗೇರಿ, ಅಪರಾಧ ವಿಭಾಗದ ಎಸ್ಸೈ ಮಧು. ಎಲ್ ಮತ್ತು ಸಿಬ್ಬಂದಿಗಳಾದ ಎಸ್. ಡಿ. ಬಾರಿಗಿಡದ, ವಿ. ಎಸ್. ಅಜ್ಜನಗೌಡರ, ಬಿ. ಜಿ. ದೇಸಾಯಿ, ಎ. ಎಂ. ಜಮಖಂಡಿ, ಬಿ. ಪಿ. ಹಡಪದ, ಚಾಲಕ ವಿಠ್ಠಲ ಬಳಗನ್ನವರ ತನಿಖೆ ನಡೆಸಿ ವಾಹನಗಳ ಸಮೇತವಾಗಿ ಆರೋಪಿತರನ್ನು ಬಂಧಿಸಿ ಹಿರಿಯ ಅಧಿಕಾರಿಗಳಿಂದ ಪ್ರಶಂಸೆ ಮತ್ತು ಇಲಾಖೆಯಿಂದ ಪ್ರೋತ್ಸಾಹಕರ ನಗದು ಬಹುಮಾನ ಪಡೆದಿದ್ದಾರೆ. ಈ ಸಂದರ್ಭದಲ್ಲಿ ಬನಹಟ್ಟಿ ಸಿಪಿಆಯ್ ಸಂಜೀವ ಬಳಗಾರ ಹಾಜರಿದ್ದರು.

## ಗ್ರಾಮೀಣ ಪ್ರತಿಭೆಗೆ ಪ್ರೋತ್ಸಾಹ ಅಗತ್ಯ: ಡಾ. ಓಲಿ

**ಬಾಗಲಕೋಟೆ :** ವಿಜ್ಞಾನವಿಲ್ಲದ ಜಗತ್ತು ಶೂನ್ಯವಾಗಿದ್ದು, ಜಾಗತಿಕವಾಗಿ ಮನುಷ್ಯ ಇಷ್ಟೊಂದು ಮುಂದುವರೆಯಲು ವೈಜ್ಞಾನಿಕ ಅನ್ವೇಷಣೆಗಳೇ ಕಾರಣ ಎಂದು ಧಾರವಾಡದ ಎಸ್‌ಡಿಎಂ ಸಂಶೋಧನಾ ಸಂಸ್ಥೆ ಪ್ರಾಚಾರ್ಯ ಡಾ. ಅಜಯಕುಮಾರ ಓಲಿ ಅವರು ಅಭಿಪ್ರಾಯ ವ್ಯಕ್ತ ಪಡಿಸಿದರು.

ನಗರದ ಬ.ವ್ಹಿ.ವ್ಹಿ ಸಂಘದ ವಿಜ್ಞಾನ ಮಹಾವಿದ್ಯಾಲಯದ ಸಭಾಂಗಣದಲ್ಲಿ ಶುಕ್ರವಾರ ಸರ್.ಸಿ.ವಿ.ರಾಮನ್ ಅವರ ಜನ್ಮದಿನದ ನಿಮಿತ್ಯ ಹಮ್ಮಿಕೊಳ್ಳಲಾಗಿದ್ದ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಅವರು, ಗ್ರಾಮೀಣ ವಿದ್ಯಾರ್ಥಿಗಳು ನಗರದ ವಿದ್ಯಾರ್ಥಿಗಳಿಗಿಂತ ಎಲ್ಲ ಬಗೆಯಲ್ಲೂ ಪ್ರತಿಭಾವಂತರಾಗಿದ್ದು, ದೇಶದಾದ್ಯಂತ ಸಾಧನೆಗೈದ ಅನೇಕ ಬಹುತೇಕ ವಿಜ್ಞಾನಿಗಳು ಗ್ರಾಮೀಣ ಹಿನ್ನಲೆಯಿಂದಲೇ ಬಂದವರಾಗಿದ್ದಾರೆ. ಆದರೆ ಯಾವುದೇ ಮೂಲ ಸೌಕರ್ಯಗಳಿಲ್ಲದ ಗ್ರಾಮೀಣ ಪ್ರತಿಭೆಗಳಿಗೆ ಸೂಕ್ತ ಅವಕಾಶಗಳನ್ನು ನೀಡಿ ಅವರಿಗೆ ಆತ್ಮವಿಶ್ವಾಸ ತುಂಬುವ ಕೆಲಸವಾದದ್ದೇ ಆದರೆ ಈ ವೈಜ್ಞಾನಿಕ ಸಾಧಕರ ಸಂಖ್ಯೆ ಗಣನೀಯವಾಗಿ ಬೆಳೆಯಲಿದೆ. ಭಾರತದ ಅನೇಕ ವಿಜ್ಞಾನ ಸಂಸ್ಥೆಗಳು ಇಂತಹ ಮಹತ್ವಪೂರ್ಣ ಕಾರ್ಯಕ್ಕೆ




ಅನೇಕ ಬಗೆಯ ಅನುದಾನ, ಧನ ಸಹಾಯ, ವೈಜ್ಞಾನಿಕ ಯೋಜನೆಗಳನ್ನು ಹಮ್ಮಿಕೊಂಡಿದ್ದು, ಇತ್ತೀಚೆಗೆ ಭಾರತದ ವೈಜ್ಞಾನಿಕ ಕ್ಷೇತ್ರದಲ್ಲಿ ಗಣನೀಯ ಕಾರ್ಯವಾಗುತ್ತಿರುವುದನ್ನು ಮನಗಾಣಬಹುದಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಪ್ರೊ. ಎಸ್. ಆರ್. ಸಬರದ ಅವರು ಮಾತನಾಡುತ್ತ ವಿದ್ಯಾರ್ಥಿಗಳು ಹೊಸ ಹೊಸ ವೈಜ್ಞಾನಿಕ ಪ್ರಯೋಗಗಳಿಗೆ ತಮ್ಮನ್ನು ತೊಡಗಿಸಿಕೊಂಡು ಜಾಗತಿಕ ಸವಾಲುಗಳಿಗೆ ಸೂಕ್ತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಪ್ರಮುಖ ಪಾತ್ರವಹಿಸಬೇಕು ಆ ಬಗೆಯಲ್ಲಿ ನಮ್ಮ ವಿದ್ಯಾಲಯ ಎಲ್ಲ ಬಗೆಯ ಸೌಕರ್ಯ ಒದಗಿಸುವಲ್ಲಿ ಹೆಚ್ಚಿನ ಮುತುವರ್ಜಿ ವಹಿಸುತ್ತ ಬಂದಿದೆ ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ವೇದಿಕೆ ಮೇಲೆ ಐಕ್ಯೂಎಸಿ ಸಂಯೋಜಕ ಡಾ. ಡಿ.ಎಸ್. ಲಮಾಣಿ, ಸಿಬ್ಬಂದಿ ಕಾರ್ಯದರ್ಶಿ ಡಾ. ಎ.ಎಂ. ಸತ್ಯನಾಯಕ, ವಿದ್ಯಾರ್ಥಿ ಕಲ್ಯಾಣ ಅಧಿಕಾರಿ ಪ್ರೊ.ಶ್ರೀಮತಿ ವ್ಹಿ.ಎನ್. ವನಕುದುರೆ ಉಪಸ್ಥಿತರಿದ್ದರು.

ಡಾ. ಡಿ.ಎಸ್. ಲಮಾಣಿ ಅವರು ಅತಿಥಿಗಳನ್ನು ಸ್ವಾಗತಿಸಿ, ಪರಿಚಿಯಿಸಿದರು. ವಿದ್ಯಾರ್ಥಿನಿಯರಾದ ಕುಮಾರಿ ಪೂಜಾ ನರಗುಂದ ಮತ್ತು ತೇಜಸ್ವಿನಿ ಬಡಿಗೇರ ಪ್ರಾರ್ಥಿಸಿ, ಶ್ರೀಮತಿ ಪೂರ್ಣಿಮಾ ಮುಚ್ಚಂಡಿ ನಿರೂಪಿಸಿ, ಡಾ. ಶ್ರೀಮತಿ ಜಯಶ್ರೀ ಉಪ್ಪಿನ ಅವರು ವಂದಿಸಿದರು.

### ಸೇನೆಯಿಂದ ನಿವೃತ್ತಿ ಹೊಂದಿದ ಯೋಧನಿಗೆ ಅದ್ದೂರಿ ಸ್ವಾಗತ

## ಸೈನಿಕರ ಬಗ್ಗೆ ಕೀಳರಿಮೆ ಹೊಂದಿದವರಿಗೆ ಪಾಠ ಕಲಿಸಬೇಕಿದೆ



**ತೇರದಾಳ :** ವೈಯಕ್ತಿಕ ಬದುಕನ್ನು ತ್ಯಜಿಸಿ ದೇಶ ಹಾಗೂ ದೇಶದ ಜನತೆಯ ಭದ್ರತೆಗಾಗಿ ಗಡಿಯಲ್ಲಿ ಹೋರಾಡುವ ವೀರ ಯೋಧರ ಬಗ್ಗೆ ಕೀಳರಿಮೆ ಹೊಂದಿದವರಿಗೆ ತಕ್ಕ ಪಾಠ ಕಲಿಸುವ ಕೆಲಸ ನಡೆಯಬೇಕಿದೆ ಎಂದು ಹಿಂದೂ ಸಂಘಟನೆ ಮುಖ್ಯಸ್ಥ ನಂದೂ ಗಾಯಕವಾಡ ನುಡಿದರು.

ಭಾರತೀಯ ಸೇನೆಯಲ್ಲಿ 22 ವರ್ಷಗಳ ಕಾಲ ಸೇವೆ ಸಲ್ಲಿಸಿ ಸೇವೆಯಿಂದ ನಿವೃತ್ತಿ ಹೊಂದಿ ಹುಟ್ಟೂರಿಗೆ ಆಗಮಿಸಿದ ಸ್ಥಳೀಯ ಯೋಧ ಸಿದ್ಧಾರೂಢ ಉಪ್ಪಾರ ಅವರಿಗೆ ಪೇಟೆ ಭಾಗದ ಮಲ್ಲಿಕಾರ್ಜುನ ದೇವಸ್ಥಾನ ಸಮುದಾಯ ಭವನದಲ್ಲಿ ಹಮ್ಮಿಕೊಂಡಿದ್ದ ಸನ್ಮಾನ ಹಾಗೂ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಫೆಬ್ರುವರಿ 14 ರಂದು 44 ಯೋಧರನ್ನು ಕಳೆದುಕೊಂಡ ಹುತಾತ್ಮರ ದಿನ. ಆದರೆ ನಮ್ಮ ಯುವಕರು ಪಾಶ್ಚಿಮಾತ್ಯರ ಸಂಸ್ಕೃತಿಯಾದ ಪ್ರೇಮಿಗಳ ದಿನ ಆಚರಿಸುತ್ತಿರುವುದು ಅತ್ಯಂತ ನೋವಿನ ಸಂಗತಿಯಾಗಿದೆ. ಆದ್ದರಿಂದ ಈ ಬಗ್ಗೆ ಯುವಶಕ್ತಿ ಜಾಗೃತಗೊಳ್ಳಬೇಕೆಂದು ಕರೆ ನೀಡಿದರು. ಸ್ಥಳೀಯ ಠಾಣಾಧಿಕಾರಿ ಅಪ್ಪಣ್ಣ ಐಗಳಿ ಮಾತನಾಡಿ, ದೇಶ ಹಾಗೂ ಸಾರ್ವಜನಿಕ ಸೇವೆ ಮಾಡುವುದೆ ಒಂದು ಸೌಭಾಗ್ಯ. ಸೈನಿಕರ ಬದುಕು ಹೇಳತೀರದು. ಕುಟುಂಬ, ಬಂಧು ಬಳಗವನ್ನು ಬಿಟ್ಟು ದೇಶದ ರಕ್ಷಣೆಯಲ್ಲಿ ತೊಡಗಿರುತ್ತಾರೆ. ಅಂತಹ ಸೇವೆ ಸಲ್ಲಿಸಿದ ಯೋಧನಿಗೆ ಅಭಿನಂದನಾ ಕಾರ್ಯಕ್ರಮ ಹಮ್ಮಿಕೊಂಡಿರುವುದು ಸೈನಿಕರಿಗೆ ಸಲ್ಲಿಸಿದ ಗೌರವ ಆಗಿದೆ ಎಂದು ಬಣ್ಣಿಸಿದರು. ಸಾನಿಧ್ಯ ವಹಿಸಿದ್ದ ಚಿಮ್ಮಡ ವಿರಕ್ತಮಠದ ಪ್ರಭು ಶ್ರೀ ಆಶೀರ್ವಚನ ನೀಡಿದರು.

ನೆನೆದು ಕಣ್ಣೀರು ಹಾಕಿದರು!– ನಂದು ಗಾಯಕವಾಡ ಮಾತನಾಡುವ ವೇಳೆ ಸೈನಿಕರು ಸೇವೆ ಸಲ್ಲಿಸುವ ಸಂದರ್ಭದಲ್ಲಿ ಅವರ ಕುಟುಂಬ ಹಾಗೂ ಅವರ ಪತ್ನಿಯರ ತ್ಯಾಗದ ಕುರಿತು ಹೇಳುತ್ತಿದ್ದಂತೆ ವೇದಿಕೆ ಮೇಲಿದ್ದ ಸಿದ್ಧಾರೂಢ ಅವರ ಪತ್ನಿ ಕಣ್ಣೀರು ಹಾಕಿದರು. ಯುದ್ಧದಲ್ಲಿ ಸೈನಿಕರ ಸ್ಥಿತಿ ಬಗ್ಗೆ ವಿವರಿಸುತ್ತಿದ್ದಂತೆ ವೇದಿಕೆ ಮುಂಭಾಗದಲ್ಲಿ ಕುಳಿತಿದ್ದ ಮಾಜಿ ಸೈನಿಕರ ಪತ್ನಿಯರೆಲ್ಲರ ಕಣ್ಣಂಚಿನಲ್ಲಿ ನೀರು ತುಂಬಿಕೊಂಡವು. ಮಾಜಿ ಸೈನಿಕರ ಸಂಘದ ಅಧ್ಯಕ್ಷ ಈರಪ್ಪ ತಾರದಾಳ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಭಗೀರಥ ಉಪ್ಪಾರ ಸಮಾಜದ ಅಧ್ಯಕ್ಷ ಅಪ್ಪಾಸಾಬ ಮೋಪಗಾರ, ಹಿರಿಯರಾದ ಮಲ್ಲಪ್ಪಣ್ಣ ಜಮಖಂಡಿ, ಪುರಸಭೆ ಸದಸ್ಯ ಸಂತೋಷ ಜಮಖಂಡಿ, ಪ್ರಭುಲಿಂಗ ಬ್ಯಾಂಕ್ ನಿರ್ದೇಶಕ ರಮೇಶ ಪಟ್ಟಣಶೆಟ್ಟಿ, ನೀಲವ್ವ ಉಪ್ಪಾರ, ಚಿದಾನಂದ ಉಪ್ಪಾರ, ನೇಮಿನಾಥ ಜಮಖಂಡಿ, ಮಹಾಂತೇಶ ಕಿತ್ತೂರ, ಗಂಗಾಧರ ಮೋಪಗಾರ, ಶ್ರೀಶೈಲ ಮೋದಿ, ಬಸವರಾಜ ವಾಲಿ, ಜಗದೀಶ ಕಬಾಡಗಿ, ಈಶ್ವರ ಕಿತ್ತೂರ, ಅಪ್ಪು ಮಂಗಸೂಳಿ, ಮಹಾಂತೇಶ ಪಂಚಾಕ್ಷರಿ ಇನ್ನಿತರರು ಭಾಗವಹಿಸಿದ್ದರು.

## ಛಲವಾದಿ ಜಿಲ್ಲಾ ಸಮಾವೇಶದ ಯಶಸ್ವಿಗೆ ಸಮಿತಿ ರಚನೆ

**ಬಾಗಲಕೋಟ :** ಮುಂಬರುವ ಎಪ್ರೀಲ ತಿಂಗಳಿನಲ್ಲಿ ಬಾಗಲಕೋಟ ಜಿಲ್ಲಾ ಮಟ್ಟದ ಛಲವಾದಿ ಸಮಾವೇಶವನ್ನು ಹಮ್ಮಿಕೊಳ್ಳಲು ತೀರ್ಮಾನಿಸಲಾಯಿತು.

ನವನಗರದ ಅಂಬೇಡ್ಕರ್ ಭವನದಲ್ಲಿ ಸೇರಿದ ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾದ ಜಿಲ್ಲಾ ಘಟಕದ ಪೂರ್ವ ಸಭೆಯಲ್ಲಿ ನಿರ್ಧಾರ ಮಾಡಲಾಯಿತು.




ಸುದೀರ್ಘ ಚರ್ಚೆಯಾದ ನಂತರ ಸಮಾವೇಶದ ಯಶಸ್ವಿಗೆ ಹಿರಿಯರ ಸೇರಿದಂತೆ ಜಿಲ್ಲಾ ಪದಾಧಿಕಾರಿಗಳನ್ನೊಳಗೊಂಡ ಪ್ರಧಾನ ಸಮಿತಿ ಮಾಡಲು ಒಪ್ಪಿಗೆ ಸೂಚಿಸಲಾಯಿತು.

ಸಮಿತಿ ಬೆಂಗಳೂರಿಗೆ ಹೋಗಿ ಅಲ್ಲಿನ ರಾಜ್ಯ ಪದಾಧಿಕಾರಿಗಳೊಂದಿಗೆ ಚರ್ಚಿಸಿ ಸಮಾಜದ ಸಚಿವರುಗಳ ದಿನಾಂಕ ಹೊಂದಿಸಿಕೊಂಡು ಸಮಾವೇಶದ ರೂಪರೇಷೆಗಳನ್ನು ಮಾಡುವದಕ್ಕೆ ಒಪ್ಪಿಗೆ ಸೂಚಿಸಲಾಯಿತು.

ಸಭೆಯಲ್ಲಿ ಜಿಲ್ಲಾಧ್ಯಕ್ಷ ಪ್ರೇಮನಾಥ ಗರಸಂಗಿ,ಹಿರಿಯರಾದ ಬಸವರಾಜ ಬದಾಮಿ,ಜಿಲ್ಲಾ ಘಟಕದ ಗೌರವಾಧ್ಯಕ್ಷರಾದ ಬಸವರಾಜ ಚಲವಾದಿ,ಜಿಲ್ಲಾ ಉಪಾಧ್ಯಕ್ಷ ರವಿ ಬಬಲೇಶ್ವರ,ಸದಾಶಿವ ಕೊಡಬಾಗಿ ಮಾತನಾಡಿ ಎಲ್ಲ ತಾಲೂಕ ಘಟಕಗಳ ಪಾತ್ರ ಬಹಳ ಮುಖ್ಯವಾಗಿದ್ದು ಸಮಾಜದ ಅಭಿವೃದ್ಧಿಗೆ ನಾಂದಿ ಹಾಡುವಂತಹ ಈ ಸಮಾವೇಶ ಅದ್ದೂರಿಯಾಗಿ ಜರುಗಬೇಕಾಗಿದೆ ಎಂದರು.

ಜಮಖಂಡಿ ತಾಲೂಕಾ ಅಧ್ಯಕ್ಷ ಶಶಿಕಾಂತ ದೊಡಮನಿ ಬದಾಮಿ ತಾಲೂಕಿನ ಆನಂದ ದೊಡಮನಿ,ಹುನಗುಂದ ತಾಲೂಕಿನ ರಾಮಚಂದ್ರ ನಾಟೇಕಾರ ಮೊದಲಾದವರು ಮಾತನಾಡಿ ಸಮಾವೇಶಕ್ಕೆ ಪೂರ್ವದಲ್ಲಿ ಮುಧೋಳ ಗುಳೆದಗುಡ್ಡ ತಾಲೂಕಾ ಘಟಕಗಳು ರಚನೆಯಾಗಬೇಕಿದೆ ನಂತರ ಸಮಾವೇಶ ಮಾಡೋಣ ಎಂದರು.

ಅವುಗಳನ್ನು ಶೀಘ್ರದಲ್ಲೇ ಮಾಡುವ ಭರವಸೆಯನ್ನು ಜಿಲ್ಲಾದ್ಯಕ್ಷ ಪ್ರೇಮನಾಥ ಗರಸಂಗಿ ನೀಡಿ ಸಮಾವೇಶದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಮಾಜದ ಸಾಧಕರಿಗೆ ಸನ್ಮಾನಿಸಲಾಗುವದು ಅಂತವರನ್ನು ತಾಲೂಕಾ ಘಟಕ ಗುರುತಿಸಬೇಕು ಎಂದರು.

ಸಭೆಯ ಅದ್ಯಕ್ಷತೆಯನ್ನು ಹಿರಿಯರಾದ ಡಾ.ಎಂ. ಹೆಚ್.ಚಲವಾದಿ ಅವರು ವಹಿಸಿ ಮಾತನಾಡುತ್ತಾ ಸಮಾಜವನ್ನು ಒಂದುಗೂಡಿಸುವ ಕಾರ್ಯ ಸಮಾವೇಶದಿಂದ ಆರಂಭವಾಗಲಿ ಸಮಾಜದ ಪ್ರತಿಯೊಬ್ಬರನ್ನು ವಿಶ್ವಾಸಕ್ಕೆ ತಗೆದುಕೊಂಡು ಮುಂದುವರಿಯಿರಿ ಎಂದು ಸಲಹೆ ನೀಡಿದರು.

ಸಭೆಯಲ್ಲಿ ಬಾಗಲಕೋಟ ಗ್ರಾಮೀಣ ತಾಲೂಕಾ ಅಧ್ಯಕ್ಷ ಪರಸುರಾಮ ಚಲವಾದಿ,ಶ್ರೀಮತಿ ಶೀಲಾದೇವಿ ಗೆಜ್ಜಲಗಟ್ಟಿ,ಶ್ರೀಮತಿ ಕಲಾಶ್ರೀ ಬನಸೋಡೆ,ಹೆಚ್.ಡಿ.ಹೊಸಮನಿ,ವೈ.ಎಸ್. ದೊಡಮನಿ,ಮಹೇಶ ಬೀಳಗಿ,ಮನೋಹರ ಗರಸಂಗಿ,ಗಜು ಕಾಂಬಳೆ,ಶನಸಪ್ಪ ನಾರಾಯಣಿ ಸೇರಿದಂತೆ ತಾಲೂಕಾ ಪದಾಧಿಕಾರಿಗಳು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಬದಾಮಿ ತಾಲೂಕಾ ಅಧ್ಯಕ್ಷರಾಗಿ ಆಯ್ಕೆಯಾದ ಆಶೋಕ ದವನಿ ಅವರನ್ನು ಸನ್ಮಾನಿಸಲಾಯಿತು.

## ಅಪಘಾತ ಪಡಿಸಿದ ಬೋರವೆಲ್ ಚಾಲಕನಿಗೆ ಶಿಕ್ಷೆ

**ಬಾಗಲಕೋಟೆ:** ನಿರ್ಲಕ್ಷತನದಿಂದ ಅತೀ ವೇಗವಾಗಿ ಬೋರವೆಲ್ ವಾಹನ ಚಲಾಯಿಸಿ ಟಂಟಂ ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ ಟಂಟಂದಲ್ಲಿದ್ದ ಓರ್ವ ಮಹಿಳೆ ಸ್ಥಳದಲ್ಲಿಯೇ ಮರಣ ಹೊಂದಿದ್ದರ ಪರಿಣಾಮ ಆರೋಪಿತ ಬೋರ್‌ವೆಲ್ ಚಾಲಕನಿಗೆ 1 ವರ್ಷ ಶಿಕ್ಷೆ ಹಾಗೂ 7500 ರೂ.ಗಳ ದಂಡಿ ವಿಧಿಸಿ ಪ್ರಧಾನ ಜೆ.ಎಂ.ಎಫ್.ಸಿ ನ್ಯಾಯಾಲಯ ಆದೇಶಿಸಿದೆ.

ಆರೋಪಿ ಬೋರವೆಲ್ ವಾಹನದ ಚಾಲಕ ಚಿದಾನಂದ ಕಬಾಡದ ಸಂಗಮ ಕ್ರಾಸ್ ಕಡೆಯಿಂದ ಬಾಗಲಕೋಟೆ ಶಹರ ಕಡೆಗೆ ಅತೀ ವೇಗವಾಗಿ ನಿರ್ಲಕ್ಷತನದಿಂದ ಚಲಾಯಿಸಿ ಮುಂದೆ ಹೊರಡು ಪ್ಯಾಸೆಂಜರ ಟಂಟಂ ವಾಹನಕ್ಕೆ ಅಪಘಾತ ಪಡಿಸಿ ಟಂಟಂದಲ್ಲಿದ್ದ ಓರ್ವ ಮಹಿಳೆಯನ್ನು ಮರಣ ಪಡಿಸಿದ್ದು, ಚಾಲಕ ಸೇರಿ ಉಳಿದ ಪ್ಯಾಸೆಂಜರ ಗಾಯಗೊಳ್ಳುವಂತೆ ಮಾಡಿದ್ದಾರೆ. ಈ ಕುರಿತು ಬಾಗಲಕೋಟೆ ಸಂಚಾರಿ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದ್ದು, ಪಿಎಸ್ಐ ಗಣಪತಿ ಕಂಗನೊಳ್ಳಿ ಸಿಪಿಐ ಶ್ರೀಶೈಲ ಗಾಬಿ ಆರೋಪಿ ವಿರುದ್ಧ ದೋಷಾರೋಪಣೆ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರು.

ವಿಚಾರಣೆಗೆ ಕೈಗೊಂಡ ಬಾಗಲಕೋಟೆ ಪ್ರಧಾನ ಜೆ.ಎಂ. ಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶ ಮುರುಗೇಂದ್ರ ತುಬಾಕೆ ಅವರು ಆರೋಪಿಯ ವಿರುದ್ಧ ಅಪರಾಧ ಸಾಬೀತಾದ ಹಿನ್ನಲೆಯಲ್ಲಿ ಆರೋಪಿಗೆ 1 ವರ್ಷ ಜೈಲು ಶಿಕ್ಷೆ ಹಾಗೂ 7500 ರೂ.ಗಳ ದಂಡ ವಿಧಿಸಿ ತೀರ್ಪು ನೀಡಿರುತ್ತಾರೆ. ಸರಕಾರದ ಪರವಾಗಿ ಸಹಾಯಕ ಸರಕಾರಿ ಅಭಿಯೋಜಕರಾದ ಶಾರದಾ ಬದಾಮಿ ಪ್ರಕರಣದ ವಾದವನ್ನು ಮಂಡಿಸಿದ್ದರು.

## ಪುನೀತ್ ರಾಜಕುಮಾರ್ ಪುತ್ತಳಿಗೆ ಮಾಲಾರ್ಪಣೆ ಹಾಗೂ ಕರ್ನಾಟಕ ಯುವ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷರಾದ ಡಾ.ಎಂ. ಎಸ್. ಸುನೀಲ್ ರವರಿಂದ ಸಂಘಟನೆಯ ಗುರುತಿನ ಚೀಟಿ ವಿತರಣೆ



**ಕೆ.ಆರ್.ಪೇಟೆ:** ತಾಲ್ಲೋಕಿನ ಕರ್ನಾಟಕ ಯುವ ರಕ್ಷಣಾ ವೇದಿಕೆಯ ಅಧ್ಯಕ್ಷರಾದ ಜಾವೀದ್ ರವರ ಅಧ್ಯಕ್ಷತೆಯಲ್ಲಿ ನಡೆದ ಗುರುತಿನ ಚೀಟಿ ವಿತರಣಾ ಸಮಾರಂಭದ ಕಾರ್ಯಕ್ರಮದಲ್ಲಿ ಪಟ್ಟಣದ ಟಿಬಿ ಸರ್ಕಲ್ ಆವರಣದಲ್ಲಿರುವ ಡಾ. ಪುನೀತ್ ರಾಜಕುಮಾರ್ ರವರ ಪುತ್ತಳಿಗೆ ಮಾಲಾರ್ಪಣೆ ಮಾಡಿ ನಂತರ ಪಟ್ಟಣದ ರಾಮದಾಸ್ ಪಾರ್ಟಿ ಹಾಲ್ ನಲ್ಲಿ ಖ್ಯಾತ ಯೋಗ ಪಟು ಅಲ್ಲಮಪ್ರಭು ರವರು ಯೋಗ ಪ್ರದರ್ಶನ ಮಾಡುವ ಮೂಲಕ ಕಾರ್ಯಕ್ರಮದ ಉದ್ಘಾಟನೆಯನ್ನು ಚಾಲನೆ ನೀಡಲಾಯಿತು,

ನಂತರ ಮಾತನಾಡಿದ ರಾಜ್ಯಾಧ್ಯಕ್ಷರಾದ ಡಾ.ಸುನೀಲ್.ಎಂ.ಎಸ್ ಕೆ.ಆರ್.ಪೇಟೆ ತಾಲೋಕಿನಲ್ಲಿ ಜಾವೀದ್ ರವರ ನೇತೃತ್ವದಲ್ಲಿ ಕರ್ನಾಟಕ ಯುವ ರಕ್ಷಣಾ ವೇದಿಕೆಯು ಹಲವಾರು ಸಮಾಜಮುಖಿ ಕಾರ್ಯಕ್ರಮಗಳನ್ನು ಮಾಡುತ್ತಾ ಬಂದಿದ್ದು ಜಾವೀದ್ ರವರ ಕ್ರಿಯಾಶೀಲತೆಯನ್ನು ಮನಗೊಂಡು ಕೆ.ಆರ್.ಪೇಟೆ ತಾಲೋಕಿಗೆ ಆಗಮಿಸಿರುವುದು ಸಂತಸದ ವಿಷಯ ನಾಡು. ನುಡಿ. ಜಲ.ನೊಂದ ಮಹಿಳೆಯರಿಗೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಕೆಲಸ ಮಾಡುವಂತೆ ಜಾವೀದ್ ರವರಿಗೆ ಬೆಂಬಲ ನೀಡುವಂತೆ ಕಾರ್ಯಕ್ರಮದಲ್ಲಿ ತಿಳಿಸಿ ಸಂಘದ ನೂತನ ಅಧ್ಯಕ್ಷರು ಹಾಗೂ ಪದಾಧಿಕಾರಿಗಳಿಗೆ ಗುರುತಿನ ಚೀಟಿ ವಿತರಿಸಿ ಶುಭ ಹಾರೈಸಿದರು,

ಈ ಕಾರ್ಯಕ್ರಮದಲ್ಲಿ ಕರ್ನಾಟಕ ಯುವ ರಕ್ಷಣಾ ವೇದಿಕೆ. ರಾಜ್ಯಾಧ್ಯಕ್ಷರಾದ ಡಾ. ಸುನೀಲ್. ಎಂ.ಎಸ್ ಹಾಗೂ ರಾಜ್ಯ ಉಪಾಧ್ಯಕ್ಷರು ಹಾಗೂ ಮೈಸೂರು ಮತ್ತು ಮಂಡ್ಯ ಜಿಲ್ಲಾ ಉಸ್ತುವಾರಿ ರವಿ, ಮ?ಸೂರು ಜಿಲ್ಲಾಧ್ಯಕ್ಷರಾದ ಸುಧಾಕರ್, ತಾಲೋಕು ಘಟಕದ ಅಧ್ಯಕ್ಷರಾದ ಜಾವೀದ್. ತಾಲೋಕು ಮಹಿಳಾ ಘಟಕದ ಅಧ್ಯಕ್ಷರಾದ ರೋಷನ್ ಬಾನು. ತಾಲೂಕು ಉಪಾಧ್ಯಕ್ಷರಾದ, ಮೋಹನ, ಕರ್ನಾಟಕ ರಾಜ್ಯ ರೈತೋದಯ ಹಸಿರು ಸೇನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಗೋವಿಂದರಾಜು , ಟೌನ್ ಅಧ್ಯಕ್ಷ ಮಂಜು. ಆಟೋ ಘಟಕದ ಉಪಾಧ್ಯಕ್ಷರಾದ ಭಾಸ್ಕರ್, ಪದಾಧಿಕಾರಿಗಳಾದ ಮೊಸಳೆ ಕೊಪ್ಪಲು. ಹನುಮೇಗೌಡ್ರು, ಆಟೋ ಮಂಜಣ್ಣ, ಆಟೋ ಪುರುಷೋತ್ತಮ್, ಆಟೋ ನಿಸಾರ್,

ಟೈಲರ್ ದೇವರಾಜು, ಟೈಲರ್ ಜುನೈದ್. ಎಸ್ ಆರ್ ಗೌಡ್ರು ಹೆಮ್ಮನಹಳ್ಳಿ, ಮಂಜುಶೆಟ್ಟಿ ಆರ್.ಎಸ್. ಕರುಣಾಕರ್, ಮರಡಹಳ್ಳಿ. ಹಸೇನ್ ನಗರ ಘಟಕ ಉಪಾಧ್ಯಕ್ಷ. ಆಟೋ ವಿಜೇಂದ್ರ ಖ್ಯಾತ ಯೋಗ ಪಟು ಅಲ್ಲಮಪ್ರಭು ಸೇರಿದಂತೆ, ಡಾ.ಪುನೀತ್ ರಾಜಕುಮಾರ್ ಅಭಿಮಾನಿ ಸಂಘದ ಅಧ್ಯಕ್ಷರಾದ ಮಹೇಶ್.ಕೆ.ಎಲ್, ಉಪಾಧ್ಯಕ್ಷರಾದ ಹರೀಶ್ ಹಲವರು ಉಪಸ್ಥಿತರಿದ್ದರು.

**ವರದಿ; ಎಸ್ ರವಿ ಹೊನ್ನೇನಹಳ್ಳಿ**

## ಐದು ವರ್ಷದ ಪುಟ್ಟ ಬಾಲಕ ರೋಜಾ ಆಚರಣೆ

**ಇಲಕಲ್:** ನಗರದ ಪ್ರತಿಷ್ಠಿತ ಮಾಗಿ ಪರಿವಾರದ ಕುಡಿ ಮೈಹಿಬೂಬ್ ಮಾಗಿ ಇವರ ಮೊಮ್ಮಗ ಅರಹಾನ್ ಮಾಗಿ ಪವಿತ್ರ ರಂಜಾನ್ ಮಾಸದ ರೋಜಾ 13 ಗಂಟೆಯ ನಿರಂತರ ನೀರು ಅನ್ನ ಆಹಾರ ಇಲ್ಲದೆ ಉಪವಾಸ ಆಚರಣೆ ಮಾಡಿದ್ದಾನೆ ನಗರದ ಜನತೆ ಅಲ್ಲಾಹನು ಆರೋಗ್ಯ ಆಯುಷ್ಯ ಸಕಲ ಸೌಭಾಗ್ಯ ಕರುಣಿಸಲಿ ಎಂದು ಶುಭ ಹಾರೈಸಿದ್ದಾರೆ.

**ವರದಿ: ಕಾಸಿಂಅಲಿಶಾ ಮಕಾನದರ್**



"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State